8.	The Karnataka Motor Vehicles (Taxation on Passengers and Goods) (Amendment) Bill, 1975	18-4-1975
9.	The Karnataka Stamp (Amendment) Bill,	19-4-1975
10.	The Registration (Karnataka Amendment) Bill, 1975.	19-4-1975
11.	The Karnataka Sales Tax (Second Amendment) Bill, 1975	28-4-1975
12.	The Karnataka Appropriation (No. 3) Bill, 1975	28-4-1975
13.	The Karnataka Agricultural Produce Marketing (Regulation) Amendment Bill, 1975	30-4-1975

The following Motion was also adopted by the Legislative Council on 19th April, 1975:

"That this House concurs in the appointment of a Joint Select Committee to consider the Karnataka Religious and Charitable Institutions and Trusts Bill, 1974 consists of a total number of 20 members (15 members from the Legislative Assembly and 5 members from Legislative Council) and that the following members of this House shall be the Members of the Joint Select Committee :

Sriyuths :

1. V.S. Krishna Iyer,
2. S. Mallikarjunaiah,
3. M.C. Perumal,
4. A. Masana Chetty,
5. G. S. Ullal.

OFFICIAL RESOLUTION

re : ratification to the Amendments made in the Constitution of India (38th Amendment) Bill, 1975 as passed by both Houses of Parliament

SRI S. M. KRISHNA (Minister for Industries and Parliamentary Affairs).—Madam Speaker, I move :

"That this House ratifies the amendments to the Constitution of India falling within the purview of the proviso to clause (2) of Articles 368 thereof, proposed to be made by the Constitution (Thirty-eighth Amendment) Bill, 1975, as passed by the two Houses of Parliament which seek to make Sikkim a State in the Union and short title of which has been changed into" the Constitution (Thirty-sixth Amendment) Act, 1975.'

Madam Speaker.—Resolution Moved :

"That this House ratifies the amendments to the Constitution of India falling within the purview of the proviso to clause (2) of Articles 368 thereof, proposed to be made by the Constitution (Thirty-eighth amendment) Bill, 1975, as passed by the two Houses of Parliament, which seeks to make Sikkim a State in the Union and the Short title of which has been changed into "The Constitution (Thirty-sixth Amendment) Act, 1975."

† ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೇ ಬಹು ಮಹತ್ವಪೂರಿತವಾದಂಥ ಈ ಗೊತ್ತುವಳಿಯನ್ನು ಈ ಸದನದ ಮುಂದೆ ಮಂಡಿಸುವುದಕ್ಕೆ ವಿಶೇಷವಾದಂಥ ಸಂತೋಷ ನನಗೆ ಆಗುವುದರ ಜೊತೆಗೆ ಹೆಮ್ಮೆಯೂ ಕೂಡ ಆಗುತ್ತದೆ. ಒಂದು ರೀತಿಯಲ್ಲಿ ನೋಡಿದರೆ ಇತಿಹಾಸವನ್ನೇ ಸೃಷ್ಟಿಮಾಡುವ ಒಂದು ಮಹತ್ತರವಾದ ನಿರ್ಣಯ ಸಂಸತ್ತಿನ ಎರಡು ಸಭೆಗಳಲ್ಲಿ ಒಪ್ಪಿಗೆ ಪಡೆದು ನಮ್ಮ ರಾಜ್ಯಾಂಗದ ತಿದ್ದುಪಡಿಯನ್ನು ಮಾಡುವುದಕ್ಕೆ ಅನುಕೂಲವಾಗಲು ಇದನ್ನು ನಮ್ಮ ಅನುಮೋದನೆಗೆ ಕಳುಹಿಸಿದ್ದಾರೆ ಸಿಕ್ಕಿಂ, ಹಲವಾರು ವರ್ಷಗಳಿಂದ ಭಾರತದ ಜೊತೆಯಲ್ಲಿ ವಿಶೇಷವಾದಂಥ ಸಂಬಂಧವನ್ನು ಇಟ್ಟುಕೊಂಡು ಬಂದಿದೆ. ಈಗ ಕೆಲವು ತಿಂಗಳುಗಳ ಕೆಳಗೆ ಇದೇ ಸದನದಲ್ಲಿ ಮತ್ತೊಂದು ಇಂಥಾದ್ದೇ ಗೊತ್ತುವಳಿಯನ್ನು ಸಿಕ್ಕಿಂ ರಾಜ್ಯದ ಬಗ್ಗೆ ಮಂಡಿಸಿ ಸದನದ ಒಪ್ಪಿಗೆಯನ್ನು ಪಡೆದಿದ್ದೆವು ಮತ್ತೆ ಅತಿ ಶೀಘ್ರದಲ್ಲಿ ಅದಕ್ಕಿಂತಲೂ ಹೆಚ್ಚು ಮಹತ್ವ ಪೂರಿತವಾದಂಥ ಇಂಥ ಒಂದು ನಿರ್ಣಯ ಬರುತ್ತದೆಂದು ನಾವು ನಿರೀಕ್ಷಣೆ ಮಾಡಿರಲಿಲ್ಲ. ಆದರೆ ಒಂದು ಮೂಲಭೂತವಾದಂಥ ಉದ್ದೇಶ ಈ ವಿಧೇಯಕದಲ್ಲಿ ಅಡಕವಾಗಿದೆ. ಅದು ಏನೆಂದರೆ. ಸಿಕ್ಕಿಂ ಜನಗಳು ತಮ್ಮ ಅಭಿಪ್ರಾಯವನ್ನು ನಿರೂಪಣೆ ಮಾಡತಕ್ಕದ್ದು. ಜನಗಳು ತಮ್ಮ ಅಭಿಪ್ರಾಯವನ್ನು ಪ್ರತಿಬಿಂಬ ಮಾಡತಕ್ಕ ರೀತಿಯಲ್ಲಿ ರಾಜ್ಯಾಂಗದ ೩೬ನೇ ತಿದ್ದುಪಡಿ ಆದರ ಬಗ್ಗೆ ಇದೆ. ಭಾರತದ ಜನತೆಯ ಜೊತೆಯಲ್ಲಿ ಎಂಥ ರೀತಿಯ ಸಂಬಂಧ ಇರಬೇಕು ಎನ್ನತಕ್ಕದ್ದರ ಬಗ್ಗೆ ಸಿಕ್ಕಿಂ ಜನತೆ ಹಲವಾರು ಬಾರಿ ಯೋಚನೆಮಾಡಿ ೧೯೭೩ನೇ ಮೇ ೮ ರಂದು ತೀರ್ಮಾನ ತೆಗೆದುಕೊಂಡು ಸಿಕ್ಕಿಂ ಅಕ್ಟ್ ೧೯೭೪ ಎಂದು ಮಾಡಿ ಜಾರಿಗೆ ತಂದಿದ್ದಾರೆ. ಇದು ಅದರ ಆಧಾರವಾಗಿದೆ. ಈ ನಿರ್ಣಯದಲ್ಲಿ ಮತ್ತೊಂದು ವಿಶೇಷವಾದಂಥ ವಿಚಾರ ಏನೆಂದರೆ ರಾಜಷಾಹಿಯನ್ನು ನಾವು ರದ್ದು ಮಾಡಿ ಬಹಳ ದಿವಸಗಳಾಗಿವೆ, ಈ ಒಂದು ನಿರ್ಣಯದಿಂದ ನಾವು ಸಿಕ್ಕಿಂನಲ್ಲಿರತಕ್ಕ ಚೋಗ್ಯಾಲ್ ಷಾಹಿಗೆ ಮಂಗಳವನ್ನು ಹಾಡುವುದಕ್ಕೆ ಕಾರಣವಾಗಿದೆ. ಆದ್ದರಿಂದ ಇದನ್ನು ನಾವು ಅಗತ್ಯವಾಗಿ ಅಂಗೀಕಾರ ಮಾಡಬೇಕಾಗಿದೆ ೧೯೭೨ನೇ ಇಸವಿಯಿಂದೀಚೆಗೆ ನಮ್ಮ ವಿದೇಶಾಂಗ ನೀತಿ ಎಷ್ಟು ಯಶಸ್ವಿಯಾಗಿದೆ ಎನ್ನುವುದರ ಬಗ್ಗೆ ನಾವು ಸದನದಲ್ಲಿ ಕೂಲಂಕಷ ಆಲೋಚನೆ ಮಾಡಿ ನೋಡಿದರೆ ಬಾಂಗ್ಲಾ ದೇಶದ ನಿರ್ಮಾಣ, ಅದಾದನಂತರ ಇತ್ತೀಚೆಗೆ ಕಾಶ್ಮೀರದ ಸಮಸ್ಯೆಯನ್ನು ಎಲ್ಲರಿಗೂ ಸಮರ್ಪಕವಾದ ರೀತಿಯಲ್ಲಿ, ತೃಪ್ತಿಕರವಾದ ರೀತಿಯಲ್ಲಿ ಇತ್ಯರ್ಥಮಾಡಿರತಕ್ಕದ್ದು. ಮತ್ತು ಇತ್ತೀಚೆಗೆ ಸಿಕ್ಕಿಂ ವಿಚಾರದಲ್ಲಿ ನಮ್ಮ ದೇಶದ ಪ್ರಧಾನಮಂತ್ರಿಗಳು ತೆಗೆದುಕೊಂಡಿರತಕ್ಕ ನಿಲುವು, ಅದಕ್ಕೆ ದೇಶದಲ್ಲಿ ಸಿಕ್ಕಿರತಕ್ಕ ಪ್ರಚಂಡ ಬೆಂಬಲ, ಇವೆಲ್ಲದರ ಕಾರಣವಾಗಿ ಸಿಕ್ಕಿಂ ಅನ್ನು ನಮ್ಮ ದೇಶದ ೨೨ನೇ ರಾಜ್ಯವನ್ನಾಗಿ ಸ್ವೀಕಾರ ಮಾಡತಕ್ಕದ್ದು ಆಗಿದೆ. ಹಾಗೂ ಚೋಗ್ಯಾಲ್ ಷಾಹಿಯನ್ನು ನಿರ್ಮೂಲ ಮಾಡತಕ್ಕದ್ದರ ಮೂಲಕ ದೇಶದಲ್ಲಿ ಪ್ರಜಾಸತ್ತೆಯ ಬೇರು ತೀವ್ರವಾಗಿ ಬಿಡಬೇಕು ಎನ್ನುವುದು ಭಾರತದ ಜನತೆಯ ಸಂಕಲ್ಪ ಇದೆ. ಈ ಸಂಕಲ್ಪ ಭಾರತದ ದೇಶದ ಹೊರಗಡೆ ಇದ್ದಂಥ ಸಿಕ್ಕಿಂ ರಾಜ್ಯಕ್ಕೂ ಕೂಡ ವಿದ್ಯುಕ್ತವಾಗಿದೆ.

ಒಟ್ಟಾರೆ ಹೇಳುವುದಾದರೆ ನಮ್ಮ ವಿದೇಶಾಂಗ ನೀತಿಗೆ, ನಮ್ಮ ಆಂತರಿಕ ಭದ್ರತೆಗೆ ಈ ಒಂದು ರಾಜ್ಯಾಂಗಕ್ಕೆ ತಿದ್ದುಪಡಿ ಬೇಕಾಗಿರುವಾಗ ಇದಕ್ಕೆ ಅನುಕೂಲವಾಗಿರತಕ್ಕಂಥ ಮತ್ತು ಇದಕ್ಕೆ ಅಗತ್ಯವಾಗಿ ಬೇಕಾಗಿರತಕ್ಕಂಥ ಈ ಒಂದು ಸಂಧಾರಣೆಗೆ ಮೂಲ ಕಾರಣರಾದಂಥ ನಮ್ಮ ಭಾರತದ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರ ದೂರದೃಷ್ಟಿ ಮತ್ತು ಅವರ ಒಂದು ಚಾಣಾಕ್ಷತನವನ್ನು ನಾವು ಒಪ್ಪಬೇಕಾಗಿದೆ. ಅದಕ್ಕಾಗಿ ಅವರಿಗೆ ಮತ್ತು ಭಾರತ ಸರ್ಕಾರಕ್ಕೆ ನಾವು ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಮತ್ತು ಕೆಲವು ಅಸಕ್ತ ರಾಷ್ಟ್ರಗಳು ಭಾರತದ ಈ ಒಂದು ನಿಲುವನ್ನು ಒಪ್ಪಿದ್ದರೂ ಇನ್ನು ಕೆಲವು ರಾಷ್ಟ್ರಗಳು ಈ ಬಗ್ಗೆ ಹಿಂಜರಿಯುತ್ತಿದ್ದಾರೆ. ಹಿಂದೆ ಟಿಬೆಟ್ ಬಗ್ಗೆ ಏನು ಎಡವಿದೆವು ಅಂಥಾದ್ದೇ ಮತ್ತೊಂದು ತಪ್ಪನ್ನು ನಾವು ಮಾಡಲಿಕ್ಕೆ ತಯಾರಾಗಿಲ್ಲ. ಪ್ರಪಂಚಕ್ಕೇನೇ ಸರಿ ಎನಿಸತಕ್ಕಂಥಾ

†Asterisks indicate that remarks or speeches have not been revised by the member concerned.

ದ್ದನ್ನು ನಾವು ಮಾಡುತ್ತೇವೆ ಎನ್ನುವುದನ್ನು ವಿದೇಶಾಂಗ ಮಂತ್ರಿಗಳಾದ ಶ್ರೀಮಾನ್ ಚವಾಹಣ್‌ರವರು ತಿಳಿಸಿದ್ದಾರೆ. ನಮ್ಮ ವಿದೇಶಾಂಗ ನೀತಿ ನಮ್ಮ ದೇಶದ ಎನ್‌ಲೈಟನ್ಡ್ ಸೆಲ್ಫ್ ಇಂಟರೆಸ್ಟ್‌ನ್ನು ಕಾಪಾಡ ತಕ್ಕಂಥಾದ್ದಾಗಿ ಬೇಕು ಎನ್ನುವ ಈ ಒಂದು ದೃಷ್ಟಿಯಿಂದ ಬೇರೆ ದೇಶದವರೂ ಕೂಡ ಭಾರತ ದೇಶದ ಬಗ್ಗೆ ತಿಳಿದುಕೊಳ್ಳಲಿ ಎಂದು ಹೇಳಿದ್ದಾರೆ. ನಮ್ಮ ದೇಶದ ಆಂತರಿಕ ಭದ್ರತೆಗೆ ಮತ್ತು ಸಿಕ್ಕಿಂ ಜನತೆಗೆ ಕೊಟ್ಟಿರತಕ್ಕಂಥ ವಚನ ಮತ್ತು ಸಿಕ್ಕಿಂ ಜನತೆಯ ಒಂದು ಇಂಗಿತ ಪ್ರಕಾರ ೧೪ ನೇ ಏಪ್ರಿಲ್ ೧೯೭೫ ನೇ ಇಸವಿಯಲ್ಲಿ ಅಲ್ಲಿ ಒಂದು ಒಪಿನಿಯನ್ ಪೋಲ್ ತೆಗೆದುಕೊಂಡರು. ಆ ಒಪಿನಿಯನ್ ಪೋಲ್‌ನಲ್ಲಿ ೫೯೬೩೭ ಜನಗಳು ಈ ಒಂದು ಚೋಗ್ಯಾಲ್ ಶಾಹಿಯನ್ನು ರದ್ದು ಮಾಡಬೇಕು ಮತ್ತು ಈ ಸಿಕ್ಕಿಂ ಭಾರತ ದೇಶದ ಒಂದು ಅವಿಭಾಜ್ಯ ಅಂಗವಾಗಿರಬೇಕು ಅಂತ ಒಪಿನಿಯನ್ ಕೊಟ್ಟರು. ಅದಕ್ಕೆ ವಿರುದ್ಧವಾಗಿ ೧೪೯೬ ಜನಗಳು ತಮ್ಮ ಮತಗಳನ್ನು ಇತ್ತರು. ಟೋಟಲ್ ಎಲೆಕ್ಟೋರೇಟ್ ಇರತಕ್ಕಥಾದ್ದು ೯೭ ಸಾವಿರ ಜನರು. ಈ ಒಂದು ವಿಧೇಯಕವನ್ನು ಈ ಸಭೆ ಒಪ್ಪಿದರೆ ಅತಿ ಬೇಗ ಸಿಕ್ಕಿಂ ಜನ ಭಾರತ ರಾಷ್ಟ್ರದ ಗಣ್ಯ ಪ್ರಜೆಗಳಾಗಿ ಆಗುವುದಕ್ಕೆ ಅನುಕೂಲ ವಾಗುತ್ತದೆ ಮತ್ತು ಸಿಕ್ಕಿಂ ಮತ್ತು ಪ್ರಜಾ ಸ್ವಾಯತ್ತತೆಯನ್ನು ಪ್ರತಿಷ್ಠಾಪನೆ ಮಾಡುವುದಕ್ಕೆ ಅನು ಕೂಲವಾಗುತ್ತದೆ. ಈ ಒಂದು ದೃಷ್ಟಿಯಿಂದ ಈ ಸಭೆ ಒಮ್ಮತದಿಂದ ಒಪ್ಪಿ ಈ ತಿದ್ದುಪಡಿಗೆ ಅನುಮತಿ ಯನ್ನು ಕೊಡಬೇಕು ಎಂದು ನಾನು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ ತಾತ್ವಿಕ ದೃಷ್ಟಿಯಿಂದ ಹಾಗೂ ನಮ್ಮ ರಾಷ್ಟ್ರದ ಸ್ಟ್ರಾಟೇಜಿಕ್ ಪಾಯಿಂಟ್ ಏನು ಇದೆ ಆ ದೃಷ್ಟಿಯಿಂದ ಈ ವಿಚಾರವನ್ನು ಗಮನದಲ್ಲಿಟ್ಟು ಕೊಂಡು ಇದಕ್ಕೆ ತಾತ್ವಿಕವಾಗಿ ಒಪ್ಪಿಗೆ ಕೊಟ್ಟರೂ ಕೂಡ, ತಾವು ತಂದಿರತಕ್ಕಂಥ ತಿದ್ದುಪಡಿ ರೀತಿ ಮತ್ತು ಪರರಾಷ್ಟ್ರದ ನೀತಿ ಧೋರಣೆ ಬಗ್ಗೆ ನಾನು ವಿರೋಧಿಸಬೇಕಾಗುತ್ತದೆ. ಇದರಲ್ಲಿ ಮುಖ್ಯವಾಗಿ ಹೇಳುವು ದಾದರೆ ಈ ಸಿಕ್ಕಿಂ ರಾಜ್ಯ ಒಂದು ಸಣ್ಣ ರಾಜ್ಯವಾದರೂ ಕೂಡ ನೇಪಾಳ ಮತ್ತು ಭೂತಾನದಷ್ಟು ದೊಡ್ಡದಾಗಿರದಿದ್ದರೂ ಈ ಒಂದು ಸಣ್ಣ ರಾಜ್ಯ ನಮ್ಮ ರಾಷ್ಟ್ರದ ಭದ್ರತೆಗೆ ಒಂದು ಬಿರುಕಾದ ಜಾಗವಾ ಗಿದೆ. ಯಾವ ಸಂದರ್ಭದಲ್ಲಿ ಯಾವ ಬಿರುಕಿನಿಂದ ಏನು ಅನಾಹುತ ನಡೆಯುತ್ತದೋ ಅದನ್ನು ತಡೆಗಟ್ಟ ಬೇಕಾದ್ದು ಯಾವ ಸರ್ಕಾರ ಇದ್ದರೂ ಕೂಡ ಅದರ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಪ್ರಜಾಪ್ರಭುತ್ವದಲ್ಲಿರತಕ್ಕಂಥಾ ನಾವು ಅದನ್ನು ಅನಾಹುತದಿಂದ ರಕ್ಷಿಸಬೇಕಾದ್ದು ನಮ್ಮ ಕರ್ತವ್ಯ. ಆದರೆ ನಮ್ಮ ರಾಷ್ಟ್ರದಲ್ಲಿರತಕ್ಕಂಥಾ ಅನೇಕ ಜನರು ಬರೇ ರಬ್ಬರ್ ಸ್ಟ್ಯಾಂಪ್ ಆಗಿರುತ್ತಾರೆ. ಅದಕ್ಕೆ ವ್ಯಥೆ ಪಡಬೇಕೋ ಅಥವಾ ಸಂತೋಷ ಪಡಬೇಕೋ ನನಗೆ ಗೊತ್ತಿಲ್ಲ. ಈಗ ಮಾನ್ಯ ಎಸ್. ಎಂ. ಕೃಷ್ಣ ಅವರು ಇಂದಿರಾಗಾಂಧಿಯವರ ನೇತೃತ್ವದಲ್ಲಿ ಇದ್ದಾರೆ. ಅಟ್ ವಾಟ್ ಕಾಸ್ಟ್ ಅವರು ಇದ್ದಾರೆ ಎನ್ನುವು ದನ್ನು ನಾವು ನೋಡಬೇಕಾಗಿದೆ. ಬಾಂಗ್ಲಾ ಪಾಕಿಸ್ತಾನದ ಒಂದು ಭಾಗವಾಗಿದ್ದುದನ್ನು ಒಂದು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡಿದಾಗ ಅನೇಕ ಸಹಸ್ರಾರು ಜನರು ಸತ್ತಿದ್ದಲ್ಲದೆ ಅನೇಕ ಸಹಸ್ರ ಕೋಟಿ ರೂಪಾಯಿ ಗಳನ್ನು ನಾವು ಖರ್ಚು ಮಾಡಿದ್ದೇವೆ. ಅಲ್ಲದೆ ಸಿಲೋನ್ ಅವರನ್ನು ಶಾಂತಿ ಮಾಡುವುದಕ್ಕೋಸ್ಕರ ವಾಗಿ ಕೆಲವು ಭಾಗಗಳನ್ನು ನಾವು ಬಿಟ್ಟು ಕೊಟ್ಟಿದ್ದೇವೆ. ಮತ್ತು ಕಾಶ್ಮೀರದಲ್ಲಿ ಶ್ರೀ ಶೇಕ್ ಅಬ್ದುಲ್ಲಾ ರವರನ್ನು ಪಟ್ಟಕ್ಕೆ ಕೂರಿಸಿದಾಗ ಯಾವ ನೀತಿಯನ್ನು ಅನುಸರಿಸಿದರು ? ಮತ್ತು ಈ ಬಗ್ಗೆ ಪಾರ್ಲಿ ಮೆಂಟಿನಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ಏನು ತೀರ್ಮಾನವಾಗಿದೆ ? ಪಾಶ್ಚಾತ್ಯ ದೇಶದವರು ಮತ್ತು ಶ್ರೀ ಶೇಕ್ ಅಬ್ದುಲ್ಲಾರವರು ಕೂತುಕೊಂಡು ಏನು ಚರ್ಚೆ ಮಾಡಿದರು? ಇದರಲ್ಲಿ ಏನಾದರೂ ಡೆಮಾ ಕ್ರಸಿ ಇದೆಯೋ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಶ್ರೀ ಶೇಕ್ ಅಬ್ದುಲ್ಲಾ ರವರು ಚುನಾಯಿತರಾಗಿ ಬಂದಂಥ ಪ್ರತಿನಿಧಿಗಳಲ್ಲ. ಅವರು ದೇಶದ್ರೋಹಿಗಳು ಎಂದು ಅನೇಕ ಸಂದರ್ಭದಲ್ಲಿ ಅವರನ್ನು ಜೈಲ್‌ನಲ್ಲಿಟ್ಟಿದ್ದರು. ಆದರೆ ಈಗ ಕಾಶ್ಮೀರದ ಸಮಸ್ಯೆ ಒಂದೇ ಸಾರಿ ಬಗೆಹರಿಯಿತು. ಈ ಸಂದರ್ಭದಲ್ಲಿ ಅದರ ಬಗ್ಗೆ ನಾವು ಯಾವುದೇ ರೀತಿಯಲ್ಲಿ ತೀರ್ಮಾನ ತೆಗೆದುಕೊಂಡರೂ ಕೂಡ ಅದು ತಪ್ಪಾಗಲಿಕ್ಕಿಲ್ಲ. ಆದರೆ ಪಾಕಿಸ್ತಾನ ಇನ್ನೂ ಕೂಡ ನಮ್ಮ ಮೇಲೆ ಬೀಳತಕ್ಕಂಥ ಒಂದು ನೀತಿಯನ್ನು ಇಟ್ಟುಕೊಂಡಿದೆ. ಈಗ ಶ್ರೀ ಶೇಕ್ ಅಬ್ದುಲ್ಲಾ ರವರು ಏನು ಇದ್ದಾರೆ ಅವರು ಚುನಾಯಿತರಾಗಿ ಬಂದಂಥ ಪ್ರತಿನಿಧಿಗಳಲ್ಲ. ಚುನಾಯಿತರಾಗಿ ಬಂದಂಥ ಮುಖ್ಯಮಂತ್ರಿಗಳನ್ನು ಕೆಳಗೆ ಇಳಿಸಿ, ಚುನಾಯಿತ ರಾಗಿ ಬರದೇ ಇದ್ದಂಥ ಇವರನ್ನು ಪಟ್ಟಕ್ಕೆ ಕೂರಿಸಿದರು. ಇವರಲ್ಲಿ ಯಾವ ನೀತಿ ಇದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಮತ್ತು ಈಹೊತ್ತು ಮುಖ್ಯವಾಗಿ ನಮ್ಮ ಮುಂದೆ ಇಟ್ಟಿರತಕ್ಕಂಥ ಈ ಬಿಲ್ಲಿನಲ್ಲಿ ಇರತಕ್ಕ ಕೆಲವು ಲೋಪಗಳನ್ನು ಹೇಳಿದರೆ ಅದು ತಪ್ಪಾಗಲಾರದು ಎಂದು ನಾನು ತಿಳಿದು ಕೊಂಡಿದ್ದೇನೆ.

ಮೊದಲನೆಯದಾಗಿ ಅವರು ಹೇಳಿರತಕ್ಕಂಥ ರೀತಿಯಲ್ಲಿ ಈ ತೀರ್ಮಾನ ತೆಗೆದುಕೊಂಡಿದೆ ಎಂದರೆ ಅಕಾರ್ಡಿಂಗ್ ಟು ವಿಷನ್ ಆಫ್ ದಿ ಪೀಪಲ್ ಅಂತ ಅವರು ಏನು ಹೇಳಿದರು ಅದನ್ನು ತೆಗೆದುಕೊಂಡರೆ ಎಷ್ಟೋ ಸಂದರ್ಭದಲ್ಲಿ ಜನಗಳ ಒಂದು ಒಪ್ಪಿಗೆಯನ್ನು ತೆಗೆದುಕೊಂಡಾಗ ಅವರ ಅಕ್ಕಪಕ್ಕದ ನೆರೆಹೊರೆಯವರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಈ ಸಿಕ್ಕಿಂ ಅನ್ನು ಭಾರತ ರಾಷ್ಟ್ರಕ್ಕೆ ಸೇರಿಸಿಕೊಳ್ಳಬೇಕು ಅಂದಾಗ ನೆರೆ ರಾಷ್ಟ್ರವಾದ ನೇಪಾಳ ಮತ್ತು ಭೂತಾನ ರಾಷ್ಟ್ರಗಳು ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಭಾರತ ಸಿಕ್ಕಿಂ ಅನ್ನು ಕಬಳಿಸಿದ ಹಾಗೆ ಎಲ್ಲಿ ನಮ್ಮನ್ನೂ ಕೂಡ ಕಬಳಿಸುತ್ತಾರೋ ಏನೋ ಎನ್ನುವ ಒಂದು ಧೋರಣೆಯನ್ನು ಮತ್ತು ಆ ಬಗ್ಗೆ ಒಂದು ಕಳವಳವನ್ನೂ ಕೂಡ ಅವರು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ನಮಗೆ ಯಾವತ್ತು ತೊಂದರೆ ಬರುತ್ತದೋ ಅನ್ನುವುದನ್ನು ವ್ಯಕ್ತ ಮಾಡಿದ್ದಾರೆ. ಚೈನಾ ಪಾಕಿಸ್ತಾನದ ಜೊತೆಯಲ್ಲಿ ಸೇರಿಕೊಂಡು ನಮಗೆ ಏನು ತೊಂದರೆ ಉಂಟು ಮಾಡುತ್ತಿದ್ದಾರೋ ಅದೇ ರೀತಿ ಅವರು ದೀರ್ಘವಾಗಿ ಯೋಚನೆ ಮಾಡುವ ಕಾಲ ಸನ್ನಿಹಿತವಾಗಿದೆ ಆದುದರಿಂದ ನೆರೆ ರಾಷ್ಟ್ರವಾದ ನೇಪಾಳ ಮತ್ತು ಭೂತಾನದವರನ್ನೂ ಕೂಡ ಈ ಬಗ್ಗೆ ಸ್ವಲ್ಪ ಕೇಳಿದ್ದರೆ ಉತ್ತಮವಾಗುತ್ತಿತ್ತು ಎಂದು ನನಗೆ ಅನಿಸುತ್ತದೆ. ಈ ಸಂದರ್ಭದಲ್ಲಿ ನಾನು ಪೇಪರ್‌ನಲ್ಲಿ ಓದಿರುವುದನ್ನು ಹೇಳುತ್ತೇನೆ. ಜನಗಳ ಒಪ್ಪಿಗೆ ಪಡೆದು, ಜನಗಳ ಇಷ್ಟಕ್ಕೆ ಮಣಿದು ನಾವು ಈ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ ಎಂದರೆ ಅನೇಕ ಪರರಾಷ್ಟ್ರಗಳಲ್ಲಿ ಈ ವಾದದ ಬಗ್ಗೆ ಇನ್ನೂ ಹೆಚ್ಚಿನ ಒಂದು ಕುತೂಹಲ ಕೆರಳಿಸಿದೆ, ಮತ್ತು ನೀವು ಮಾಡಿರತಕ್ಕಂಥ ವಾದ ಸರಿ ಎಂದು ಪರ ರಾಷ್ಟ್ರಗಳು ಒಪ್ಪಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಇದರ ಜೊತೆಗೆ ನೇಪಾಳ ಮತ್ತು ಡೆಲ್ಲಿಯಲ್ಲಿ ಜನಗಳು ಇದರ ಬಗ್ಗೆ ಪ್ರತಿಭಟನೆ ಮಾಡಿದ್ದಾರೆ ಎಂದು ನಾನು ಓದಿದ್ದೇನೆ, ಈ ಸಂದರ್ಭದಲ್ಲಿ ನಾನು ಮುಖ್ಯವಾಗಿ ಹೇಳತಕ್ಕಂಥಾದ್ದು ಇಷ್ಟೆ. ಈ ಸಿಕ್ಕಿಂ ಜನರು ಮೊದಲಿನಿಂದಲೂ ಕೂಡ ನಾವು ಭಾರತದ ಒಂದು ಅಂಗವಾಗಿರಬೇಕು ಎಂದು ಹೇಳುತ್ತಾ ಇದ್ದರು. ಇದನ್ನು ನಮ್ಮ ರಾಜ್ಯದ ಒಂದು ಭಾಗವಾಗಿ ಸೇರಿಸಿಕೊಳ್ಳುವುದಕ್ಕಾಗಿ ಇಂತಹ ಒಂದು ಬಿಲ್ಲನ್ನು ತಂದು ಸಿಕ್ಕಿಂನ್ನು ಒಂದು ಸ್ವತಂತ್ರ ರಾಜ್ಯವಾಗಿ ಮಾಡಿ ಸಂವಿಧಾನದ 36ನೇ ತಿದ್ದುಪಡಿ ತಂದು ಅದಕ್ಕೆ ಒಪ್ಪಿಗೆ ಕೊಡುವುದಕ್ಕಾಗಿ ಇಲ್ಲಿ ಇದನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದರ ಬಗ್ಗೆ ನನ್ನ ಮುಖ್ಯವಾದ ಆಕ್ಷೇಪಣೆ ಏನೆಂದರೆ ನಮ್ಮ ಭಾರತ ರಾಷ್ಟ್ರ ಇದೇ ರೀತಿ ಎಲ್ಲ ವಿಚಾರಗಳಲ್ಲೂ ಕಾನ್ಸ್‌ಟಿಟ್ಯೂಷನ್ ಪ್ರಕಾರ ನಡೆದುಕೊಂಡಿದಾರೆಯೋ ಎನ್ನುವುದು. ನಾಳೆ ದಿವಸ ತಮಿಳುನಾಡಿನ ಸರಕಾರದವರು ಅಟಾನಮಸ್ ಸ್ಟೇಟ್ ಬಗ್ಗೆ ನಮ್ಮ ಜನರು ಕೇಳುತ್ತಿದ್ದಾರೆ ನಮಗೂ ಅಟಾನಮಸ್ ಕೊಡಿ ಎಂದು ಕೇಳಿದರೆ ಭಾರತ ಸರ್ಕಾರದವರು ಕೊಡುತ್ತಾರೆಯೋ ಎನ್ನುವುದನ್ನು ಇಲ್ಲಿ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಇದರ ಜೊತೆಗೆ ನನಗೆ ಬಂದಿರುವ ಮುಖ್ಯ ಕೊರತೆ ಎಂದರೆ ಇಂತಹ ಒಂದು ದೊಡ್ಡ ಜವಾಬ್ದಾರಿಯನ್ನು ಭಾರತ ರಾಷ್ಟ್ರ ತನ್ನ ತಲೆಯ ಮೇಲೆ ಹೊರುವುದು ಸರಿಯಲ್ಲ ಎಂದು ನಾನು ಇಲ್ಲಿ ಸ್ವಲ್ಪ ಕಠಿಣವಾಗಿಯೇ ಹೇಳಬೇಕಾದ ಪರಿಸ್ಥಿತಿ ಇದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಇದರಲ್ಲಿರುವ ಹತ್ತನೇ ಷೆಡ್ಯೂಲ್‌ನಲ್ಲಿ

"Part B:

(a) shall be solely responsible for the defence and territorial integrity of Sikkim and for the conduct and regulation of the external relations of Sikkim, whether political economic or financial' ಎಂದು ಇದೆ ಒಂದು ಸಣ್ಣ ರಾಷ್ಟ್ರ ಸಿಕ್ಕಿಂ. ಇದು ನಮ್ಮ ರಾಷ್ಟ್ರದ ಒಂದು ಗಡಿ ಭಾಗದಲ್ಲಿದೆ. ನಾವು ಇದನ್ನು ತೆಗೆದುಕೊಳ್ಳುವುದರಲ್ಲಿ ಅಡ್ಡಿ ಇಲ್ಲ. ಮತ್ತು ಇವುಗಳನ್ನು ಪೂರ್ಣವಾಗಿ ವಶಕ್ಕೆ ತೆಗೆದುಕೊಳ್ಳುವಾಗ ಇದರ ಎಲ್ಲ ಫೈನಾನ್‌ಷಿಯಲ್, ಎಕನಾಮಿಕಲ್ ಹಾಗೂ ಸೋಷಿಯಲ್ ಜವಾಬುದಾರಿಗಳನ್ನೂ ಕೇಂದ್ರ ಸರಕಾರ ತನ್ನ ತಲೆಯ ಮೇಲೆ ಹೊತ್ತುಕೊಂಡಿದೆ. ಹಾಗೇ ಇದರಲ್ಲಿ,

"shall have the exclusive right of constructing, maintaing and regulating the use of railways, aerodromes, landing grounds and air navigation facilities, posts, telegraphs, telephones and wireless installations in Sikkim;

(c) shall be responsible for securing the economic and social development of Sikkim and for ensuing good administration and the maintenance of communal harmony therein:' ಎಂದು ಇದಲ್ಲದೆ, ಮತ್ತು

"(e) shall be responsible for providing facilities for the participation and representation of the people of Sikkim in the political institutions of India." ಎಂದಿದೆ.

ಇದರಲ್ಲಿ ಮುಖ್ಯವಾಗಿ ಏನು ನೋಡಬೇಕಾಗಿದೆ ಎಂದರೆ, ಸಿಕ್ಕಿಂ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದರ ಬಗ್ಗೆ ಮತ್ತು ಅವರಿಗೆ ಬೇಕಾಗುವಂತಹ ಅನುಕೂಲಗಳನ್ನು ಒದಗಿಸಿಕೊಡುವುದರ ಬಗ್ಗೆ ಎಲ್ಲ ಜವಾಬುದಾರಿಗಳನ್ನೂ, ಭಾರವನ್ನೂ ಕೇಂದ್ರ ಸರಕಾರ ತನ್ನ ತಲೆಯ ಮೇಲೆ ಹೊತ್ತು ಕೊಂಡಿದೆ. ಅಂದ ಮೇಲೆ ಇದೂ ಕೂಡ ನಮ್ಮ ಕೇಂದ್ರ ಸರಕಾರಕ್ಕೆ ಸೇರಿರುವ ಒಂದು ರಾಷ್ಟ್ರದಂತೆ ಆಯಿತು. ಈಚೆಗೆ ಕೇಂದ್ರ ಸರಕಾರ ಅವರ ಉದ್ಯೋಗಿಗಳಿಗೆ ಡಿ.ಎ ಯನ್ನು ಏರಿಸಿದಾಗ ರಾಜ್ಯ ಸರಕಾರ ಗಳವರೂ ಕೂಡ ತಮ್ಮ ರಾಜ್ಯದ ಉದ್ಯೋಗಿಗಳಿಗೆ ಡಿ.ಎ. ಕೊಡಬೇಕಾಗಿ ಬಂದಿದೆ. ಇದಕ್ಕಾಗಿ ಕೇಂದ್ರ ಸರಕಾರ ನೆರವು ಕೊಡಬೇಕೆಂದು ಕೇಳಿದಾಗ ಅದನ್ನು ಕೇಂದ್ರ ಸರಕಾರ ನಿರಾಕರಿಸುತ್ತದೆ. ಹೀಗಿರುವಾಗ ಕೇಂದ್ರ ಸರಕಾರ ಇಂತಹ ಒಂದು ಸಣ್ಣ ರಾಜ್ಯದ ಎಲ್ಲ ಜವಾಬುದಾರಿಗಳನ್ನೂ ತಮ್ಮ ತಲೆಯ ಮೇಲೆ ಹೊತ್ತುಕೊಳ್ಳುವುದು ಅಷ್ಟು ಸರಿಯಲ್ಲ. ಎಲ್ಲ ರಾಜ್ಯಗಳೂ ತಮ್ಮ ಕಾಲ ಮೇಲೆ ನಿಲ್ಲುವಂತೆ ತಮ್ಮ ಆರ್ಥಿಕ ಸ್ಥಿತಿಗಳನ್ನು ಬೆಳೆಸಿಕೊಳ್ಳಬೇಕು ಮತ್ತು ರಾಜ್ಯಗಳ ಆಡಳಿತ ಚೆನ್ನಾಗಿ ನಡೆಯಬೇಕು ಮತ್ತು ರಾಜ್ಯಗಳ ಉತ್ಪತ್ತಿ ಹೆಚ್ಚಾಗುವಂತೆ ಮಾಡಬೇಕು ಮತ್ತು ರಾಜ್ಯಗಳ ಜನರೂ ಕೂಡ ತಮ್ಮ ಕಾಲಿನ ಮೇಲೆ ತಾವೇ ಸಂಪಾದನೆ ಮಾಡಿಕೊಂಡು ಸ್ವಂತವಾಗಿ ನಿಲ್ಲುವ ಶಕ್ತಿಯನ್ನು ಪಡೆಯಬೇಕು. ಇವನ್ನೆಲ್ಲಾ ಮಾಡಲು ಸ್ವಲ್ಪ ಕಾಲ ಕೊಡಬಹುದಾಗಿತ್ತು. ಎಂದರೆ ಹತ್ತು ವರ್ಷ ಇಲ್ಲವೇ ಇಪ್ಪತ್ತು ವರ್ಷಗಳ ಅವಧಿ ಕೊಟ್ಟು ಅನಂತರ ಇವನ್ನು ಸೇರಿಸಿಕೊಳ್ಳಬಹುದಾಗಿತ್ತು. ಆದರೆ ಇಲ್ಲಿ ಹಾಗೆ ಮಾಡದೆ ಇವರ ಸಂಪೂರ್ಣ ಜವಾಬುದಾರಿಯನ್ನು ತೆಗೆದುಕೊಳ್ಳಲು ರಾಜ್ಯಾಂಗದಲ್ಲಿ ತಿದ್ದುಪಡಿ ಮಾಡಿ ಇಲ್ಲಿ ಇಂತಹ ಒಂದು ಬಿಲ್ಲನ್ನು ನಮ್ಮ ಮುಂದೆ ಒಪ್ಪಿಗೆಗಾಗಿ ಇಟ್ಟಿದ್ದಾರೆ ಇದರಿಂದೇನಾಗುತ್ತದೆ ಎಂದರೆ ಈ ರಾಜ್ಯ ತನ್ನ ಸ್ವಂತ ಕಾಲಿನ ಮೇಲೆ ನಿಂತುಕೊಳ್ಳುವುದಕ್ಕಾಗದೆ ಪ್ರತಿಯೊಂದಕ್ಕೂ ಕೇಂದ್ರ ಸರಕಾರದ ಮೇಲೆ ಅವಲಂಬನೆ ಮಾಡಬೇಕಾಗಿ ಬರುತ್ತದೆ. ಅಲ್ಲಿನ ಪ್ರಜೆಗಳ ಹಿತದೃಷ್ಟಿಯಿಂದ ಇದನ್ನು ಮಾಡಲಾಗಿದೆ ಎಂದು ಇಲ್ಲಿ ಹೇಳಿದರು. ಆದರೆ ಅಲ್ಲಿನ ಜನರು ಸ್ವಶಕ್ತಿಯಿಲ್ಲದೆ ಪ್ರತಿಯೊಂದು ವಿಚಾರದಲ್ಲೂ ತಮ್ಮ ಜವಾಬುದಾರಿಯನ್ನು ನಿರ್ವಹಿಸಲು ಕೇಂದ್ರದವರ ಮೇಲೆ ನಿಲ್ಲಬೇಕಾದ ಪರಿಸ್ಥಿತಿ ಬರುತ್ತದೆ. ಅದರಿಂದ ಏನಾಗುತ್ತದೆ ಎದರೆ ಇಲ್ಲಿನ ಜನಗಳು ಸೋಮಾರಿಯಾಗಲು ಅವಕಾಶ ಮಾಡಿಕೊಟ್ಟಂತಾಗುತ್ತದೆ ಆರ್ಥಿಕ ಉತ್ಪನ್ನವನ್ನು ಹೆಚ್ಚು ಮಾಡುವುದಕ್ಕಾಗಲೀ ಹಾಗೂ ಆರ್ಥಿಕ ಸಮಾನತೆಯನ್ನು ತರುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ ಇದರ ಎಲ್ಲ ಜವಾಬುದಾರಿಗಳನ್ನೂ ಸಂಪೂರ್ಣವಾಗಿ ಕೇಂದ್ರ ಸರಕಾರವೇ ವಹಿಸಿ ಕೊಳ್ಳುವುದರಿಂದ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳಲು ಪ್ರಯತ್ನ ಕೂಡ ಮಾಡುವು ದಿಲ್ಲ. ಇದಕ್ಕಾಗಿ ನಾನು ಸಲಹೆ ಮಾಡುವುದು ಒಂದು ಕಾಲಾವಧಿ ಎಂದರೆ ಹತ್ತು ಇಲ್ಲವೇ ಇಪ್ಪತು ವರ್ಷಗಳವರೆಗೆ ಅವಕಾಶ ಕೊಟ್ಟು ಆ ರಾಜ್ಯದ ಆರ್ಥಿಕ ಸ್ಥಿತಿ ಉತ್ತಮವಾದ ನಂತರ ಇವನ್ನು ಕೇಂದ್ರ ಸರಕಾರ ತಮ್ಮ ವಶಕ್ಕೆ ತೆಗೆದುಕೊಂಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನ್ನ ಭಾವನೆ. ಇದಕ್ಕಾಗಿ ಕಾನ್ಸ್ ಟಿಟ್ಯೂಷನ್‌ಗೆ ತಿದ್ದುಪಡಿ ಮಾಡಿ ಇಂತಹ ಒಂದು ಬಿಲ್ಲನ್ನು ತರುವಾಗ ಇವನ್ನೆಲ್ಲಾ ಸ್ವಲ್ಪ ಯೋಚನೆ ಮಾಡಬೇಕಾಗಿತ್ತು ಇದರಲ್ಲಿ ಇನ್ನೊಂದು ಮುಖ್ಯವಾದ ವಿಚಾರವನ್ನು ಇಲ್ಲಿ ಹೇಳಬೇಕಾಗಿದೆ. ಪರ ರಾಷ್ಟ್ರಗಳ ಬಗ್ಗೆ ನಮ್ಮ ರಾಷ್ಟ್ರದ ನೀತಿ ಸರಿಯಾಗಿಲ್ಲ ಎಂದು ಹೇಳಬೇಕಾಗಿದೆ. ಇದು ಬಹು ಶೋಚನೀ ಯವಾದ ವಿಚಾರ. ನಮ್ಮ ನೆರೆಯಲ್ಲಿ ಪಾಕಿಸ್ತಾನ ರಾಜ್ಯ ಇದೆ. ಇದು ಒಂದು ಕಡೆ ಚೈನಾ ದೇಶವನ್ನು ದೊಡ್ಡಣ್ಣ ಎಂದು ಕರೆದುಕೊಂಡು ಅವರಿಂದ ತಮಗೆ ಬೇಕಾದ ನೆರವನ್ನು ಪಡೆದು ಮುಂದೆ ಸಮಯ ಬಂದಾಗ ನಮ್ಮ ರಾಷ್ಟ್ರದ ಮೇಲೆ ತಿರುಗಿ ಬೀಳಬಹುದು. ಹಾಗೇ ಅಮೇರಿಕಾದವರೊಡನೆ ಸ್ನೇಹ ಮಾಡಿಕೊಂಡು ಅವರಿಂದ ಆಯುಧಗಳನ್ನು ಪಡೆದುಕೊಂಡು ಶೇಖರಿಸುತ್ತಿದೆ. ಹೀಗೆ ಈಗ ನಮ್ಮ ನೆರೆ ರಾಷ್ಟ್ರವಾಗಿ ಸಿಕ್ಕಿಂನ್ನು ಕೂಡ ಸೇರಿಸಿಕೊಳ್ಳಬೇಕೆಂದು ಈಗ ಇಲ್ಲಿ ಬಿಲ್ಲನ್ನು ತರುತ್ತಿದ್ದಾರೆ. ಆರ್ಥಿಕ ನೆರವು ಪಡೆಯುತ್ತೇವೆಂದು ಅಮೇರಿಕಾದಿಂದ ಸಹಪಾಲು ನೆರವನ್ನು ಪಾಕಿಸ್ತಾನ ಪಡೆದುಕೊಳ್ಳುತ್ತಿದೆ. ಇದರ ಉದ್ದೇಶ ನೆರೆಹೊರೆಯ ರಾಷ್ಟ್ರಗಳಿಗೆ ತೊಂದರೆ ಮಾಡುವುದಿಲ್ಲ ಎಂದು ಬಾಯಲ್ಲಿ ಹೇಳಿದರೂ ಕೂಡ ಮುಂದೆ ಇದರಿಂದ ನಮ್ಮ ರಾಷ್ಟ್ರ ತೊಂದರೆಗೆ ಈಡಾಗಬೇಕಾಗಿ ಬರಬಹುದು. ಇದನ್ನು ನಾವು ಇಲ್ಲಿ ಯೋಚನೆ ಮಾಡಬೇಕಾಗಿದೆ. ಇದರಲ್ಲಿ ಒಂದು ವಿಚಾರವನ್ನು ನಾವು ಒಪ್ಪಿಕೊಳ್ಳಲೇಬೇಕು. ನಮ್ಮ ಅಕ್ಕಪಕ್ಕದ ರಾಜ್ಯಗಳು ಎಲ್ಲಿಯವರೆಗೆ ಸುಖವಾಗಿರುತ್ತವೋ ಅಲ್ಲಿಯವರೆಗೆ ನಮ್ಮ ರಾಜ್ಯಕ್ಕೆ ತೊಂದರೆ ಯಾಗುವುದಿಲ್ಲ. ಆದರೆ ಮೊದಲು ಪಾಕಿಸ್ತಾನದೊಡನೆ ಬಾಂಗ್ಲಾ ದೇಶ ಇದ್ದಾಗ ಅದರ ಶಕ್ತಿ ಹೆಚ್ಚಾ ಗಿತ್ತು. ಆದರೆ ಬಾಂಗ್ಲಾ ದೇಶವಾದ ನಂತರ ಪಾಕಿಸ್ತಾನದ ಶಕ್ತಿ ಸ್ವಲ್ಪಮಟ್ಟಿಗೆ ಕುಗ್ಗಿದೆ. ಬಾಂಗ್ಲಾ ದೇಶವಾಗುವುದಕ್ಕೆ ಮುಂಚೆ ಪಾಕಿಸ್ತಾನದವರು ಪದೇ ಪದೇ ಆ ರಾಜ್ಯದ ಜನರ ಮೇಲೆ ನುಗ್ಗುತ್ತಿ ದ್ದರು. ಅನಂತರ ಬಾಂಗ್ಲಾ ರಾಜ್ಯ ಬೇರೆಯಾದಾಗ ಅದಕ್ಕೆ ಭಾರತ ರಾಜ್ಯ ಸಾಕಷ್ಟು ನೆರವು ಕೊಟ್ಟು ಸಹಾಯ ಮಾಡಿತ್ತು ಮತ್ತು ಅವರ ರಾಜ್ಯವನ್ನು ಸೂಕ್ತವಾಗಿ ಕಟ್ಟಲು ನಮ್ಮ ರಾಜ್ಯದಿಂದ ವಿಶೇಷವಾಗಿ

ANNEXURE

THE KARNATAKA APPROPRIATIO N (No. 3) BILL, 1975

Bill to provide for the authorisation of appropriation of moneys out of the Consolidated Fund of the State to meet the amounts spent on certain services during the financial year 1969-70 in excesso the amounts granted for those services and that year.

WHEREAS it is expndient to provide for authorisation of appropriation of moneys out of the Consolidated Fund of the State to meet the amounts spent on certain services during the financial year 1969-70 in excess of the amounts granted for those services and for that year;

BE it enacated by the Karnataka State Legislature in the Twenty-sixth year of the Republic of India as follows:

1. **Short title.**—This Act may be called the Karnataka Appropriation (No. 3) Act 1975

2. **Issue of rupees 10,68,28,678 out of the Consolidated Fund of the State to meet Certain excess expenditure for the finacial year 1969-70.**—From and out of the Cousolidated Fund of the State, the sums specified in column 3 of the Schedule amounting to the aggregate to the sum of ten crores, sixty-eight lakhs, twenty-eight thound, six hunderd and seventy-six shall be deemend to have been authorised to be paid and applied to meet the amounts spent for derfraying the charges in respect of the services specified in column 2 of the Schedule during the financial year 1969-70 in excess of the amounts granted for those services and for that year.

3. **Appropriation,**—The sums deemed to have been authorised to be paid and applied from and out of the Consolidated Fund of the State under this Act shall be deemed to have been appropriated for the services and purposes expressed in the Schedule in relation to the financial year 1969-70.

Statement of objects and Reasons

The Bill is introduced in pursuance of the provision of Article 204 (1) of the Constitution of India read with Article 205 thereof to provide for the authorisation of appropriation of moneys out of the Consolidated Fund of the State to meet the amount spent on certain services during the financial year 1969-70 in excess of the amounts granted for those services and for that year.

M. Y. GHORPADE.

Te. HANUMANTHAPPA,

Secretary

THE SCHEDULE

(*See* Sections 2 & 3)

No. of Demand	Services and Purposes	Sums not exceeding		Total
		Voted by the Legislative Assembly	Charged on the Consolidated Fund	
1	2	3		4
	A. Expenditure met from Revenue			
7	Stamps ...	4,96,501	...	4,96,501
8	Registration ..	2,34,436	...	2,34,436
11	Administration of Justice ...	...	9,2?4	9,234
21	Rural Development ...	11,69,361	...	11,69,361
29	Irrigation (Commercial) ...	2,73,014	...	2,73,014
31	Public works ...	91,49,270	...	91,49,270
34	Pension & other Retirement Benefits ...	12,46,752	...	12,46,752
38	Forest ...	...	40,871	40,871

39	Miscellan ous ...	...	1,73,244	1,73,244
40	Commutation of Pensions ...	2,33,512	...	2,33,512
41	Miscellaneous Compensations and Assignments ...	10,63,400	...	10,63,400
	Total A ...	1,38,66,246	2,23,349	1,40,89,595
	C. Capital Account outside the Revenue Account			
43	Capital outlay on Improvement of Public Health ...	20,45,707	...	20,45,707
45	Capital outlay on Irrigation (Commercial) ...	4,15,87,220	...	4,15,87,220
50	Development of Minor Posts ...	...	23,766	23 766
52	Commuted value of Pensions ..	1,54,285	29,913	1,84,198
	Total C ...	4,37,87,212	53,679	4,38,40,891
D.	**Public Debt. Repayment & R. Inter-State settlement.**			
	Public Debt. Repayment etc., ...	...	4,88,98,190	4,88,98,190
	Total ...	...	4,88 98,190	4,88,98,190
	Grand Total ...	5,76,53,458	4,91 75,218	10,68,28,675

WD—2695—GPB—550—20-8-1975

ಸಿಮೆಂಟನ್ನು ಕೊಟ್ಟಿತ್ತು. ನಮ್ಮ ರಾಜ್ಯದವರು ಇನ್ನೊಂದು ರಾಜ್ಯವನ್ನು ಸೇರಿಸುವಾಗ ಪರ ರಾಷ್ಟ್ರದ ಬಗ್ಗೆ ಸರಿಯಾದ ನೀತಿಯನ್ನು ಅನುಸರಿಸುತ್ತಿಲ್ಲ. ಇದರ ಬಗ್ಗೆ ನಮಗೆ ಕಳವಳ ಉಂಟಾಗಿದೆ. ಮುಂದೆ ಒಂದು ಕಾಲದಲ್ಲಿ ನಮ್ಮ ರಾಜ್ಯದಲ್ಲಿ ನಡೆಸತಕ್ಕ ಆಡಳಿತ ಸರಿಯಾಗಿಲ್ಲ ಎಂದು ಅಲ್ಲಿನ ಪ್ರಜೆಗಳು ಆಂದೋಲನ ಮಾಡಿದರೆ ಆಗ ಜನರಿಂದ ಚುನಾಯಿತರಾದ ಪ್ರತಿನಿಧಿಗಳು ಇರಬೇಕು ಎಂದು ಹೇಳುವ ಕಾಲ ಬಂದರೂ ಬರಬಹುದು. ಜನರಿಂದ ಚುನಾಯಿತರಾದ ನೂರಾರೂ ರಾಜ್ಯಗಳೂ ಇರಬಹುದು. ಆದುದರಿಂದ ಇಂತಹ ಒಂದು ರಾಜ್ಯದ ಎಲ್ಲ ಜವಾಬುದಾರಿಗಳನ್ನೂ ಕೇಂದ್ರ ಸರಕಾರ ವಹಿಸಿಕೊಳ್ಳುವಾಗ ಇದರ ಬಗ್ಗೆ ಯೋಚನೆ ಮಾಡಬೇಕಾಗಿತ್ತು. ಎಲ್ಲಿಯವರೆಗೆ ಆಡಳಿತದಲ್ಲಿ ಕಷ್ಟವಿರುವುದಿಲ್ಲವೋ ಅಲ್ಲಿಯವರೆಗೆ ಜನರೂ ಸುಖವಾಗಿರುತ್ತಾರೆ. ಮತ್ತು ನಮ್ಮ ರಾಷ್ಟ್ರದ ಬಗ್ಗೆ ಅಭಿಮಾನ ತೋರಿಸಿ ಸಂತೋಷದಿಂದ ಇರುತ್ತಾರೆ. ಯಾವತ್ತು ಅವರಿಗೆ ಬರುವ ವರಮಾನ ಕಡಿಮೆಯಾಗಿ ಆರ್ಥಿಕ ಸ್ಥಿತಿ ಸರಿಯಾಗುವುದಿಲ್ಲವೋ ಆಗ ಅವರು ನಮಗೆ ಬೇರೆ ರಾಜ್ಯದವರೊಡನೆ ಸೇರುವುದು ಬೇಡ ಎಂದು ಹೇಳಿದರೆ ಆಗ ನಮ್ಮ ರಾಜ್ಯದವರೂ ಕೂಡ ಯೋಚನೆ ಮಾಡಬೇಕಾಗಿ ಬರುತ್ತದೆ. ಇದಕ್ಕಾಗಿ ನಾನು ನಮ್ಮ ರಾಜ್ಯ ಸರಕಾರದಲ್ಲಿ ಬೇಡಿಕೊಳ್ಳುವುದು ಏನೆಂದರೆ ಕೇಂದ್ರ ಸರಕಾರದವರಿಗೆ ಇದರ ಬಗ್ಗೆ ಸರಿಯಾದ ತಿಳುವಳಿಕೆ ಕೊಡುವುದು ಸೂಕ್ತ ಎಂದು ಹೇಳುತ್ತೇನೆ.

ಎಲ್ಲಿಯವರೆಗೆ ಸಿಕ್ಕಿಂ ರಾಜ್ಯ ಅಲ್ಲಿನ ಜನರಿಗೆ ತೃಪ್ತಿಕರವಾದ ಅನುಕೂಲಗಳನ್ನು ಮಾಡಿಕೊಡುವುದೋ ಅಲ್ಲಿಯವರೆಗೆ ಏನೂ ಭಯವಿಲ್ಲ. ಆದರೆ ಜನರಲ್ಲಿ ಏನಾದರೂ ಭಿನ್ನಾಭಿಪ್ರಾಯಗಳು ಬಂದರೆ ಆಗ ಅಲ್ಲಿನ ಜನರು ಸುಮ್ಮನೆ ಕುಳಿತುಕೊಳ್ಳುವುದಿಲ್ಲ ಇಂತಹ ಅನುಭವಗಳು ನಮಗೆ ಹಿಂದೂ ಬೇರೆ ರಾಜ್ಯಗಳನ್ನು ಸೇರಿಸಿಕೊಂಡಾಗ ಬಂದಿವೆ, ಇದಕ್ಕಾಗಿ ಇಂಡಿಯಾ ಸರಕಾರದವರು ಜನಗಳ ಹಿತದೃಷ್ಟಿಯಿಂದ ಅವರಿಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ಇಲ್ಲೂ ಹಾಕಿಕೊಳ್ಳಬೇಕಾಗುತ್ತದೆ. ಇಂತಹ ಒಂದು ಕಾರ್ಯಕ್ರಮವನ್ನು ಕೇಂದ್ರ ಸರಕಾರ ತೆಗೆದುಕೊಳ್ಳುವುದು ಅಗತ್ಯವಾಗಿದೆ ಎಂದು ರಾಜ್ಯ ಸರಕಾರ ಅವರಿಗೆ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗಿನ ಪರಿಸ್ಥಿತಿಯಲ್ಲಿ ನಮ್ಮ ದೊಡ್ಡಣ್ಣ ಎಂದು ಚೈನಾ ದೇಶವನ್ನು ಪಾಕಿಸ್ತಾನ ಹೇಳುತ್ತಿವೆ ಹಾಗೂ ನಮ್ಮ ಸ್ನೇಹ ರಾಷ್ಟ್ರ ಅಮೆರಿಕಾ ಎಂದೂ ಪಾಕಿಸ್ತಾನ ಇದುವರೆಗೂ ಹೇಳಿಕೊಂಡು ಬರುತ್ತಿದೆ ಇದಲ್ಲದೆ ನಮ್ಮ ಬಾರ್ಡರಿನಲ್ಲಿ ಮಿಜೋಲ್ಯಾಂಡು ಇದೆ, ನಾಗಾಲ್ಯಾಂಡು ಇದೆ. ಇವುಗಳಿಂದ ಕೂಡ ಆಗಾಗ್ಗೆ ನಮ್ಮ ರಾಷ್ಟ್ರಕ್ಕೆ ಬಹಳವಾದ ಕಷ್ಟಗಳು ಬರುತ್ತಿವೆ. ನಾವು ನಮ್ಮ ಸೆಕ್ಯೂರಿಟಿ ಫೋರ್ಸ್‌ಗಳನ್ನು ಬಹಳವಾಗಿ ಬಲಪಡಿಸಿಕೊಂಡಿದ್ದರೂ ಕೂಡ ಅನೇಕ ವೇಳೆ ನಾಗಾ ಲ್ಯಾಂಡಿನಲ್ಲಿ ನಮ್ಮ ಅಧಿಕಾರಿಗಳು ಕೊಲೆಗಳಾಗಿರುವುದನು ನಾವು ಪೇಪರುಗಳಲ್ಲಿ ಓದಿ ತಿಳಿದುಕೊಂಡಿದ್ದೇವೆ. ಈಗ ನೇಪಾಳ ಹಾಗೂ ಭೂತಾನದ ಮಧ್ಯೆ ಇರುವ ಸಣ್ಣ ರಾಜ್ಯ ಸಿಕ್ಕಿಂ ರಾಜ್ಯ. ಇದರಿಂದ ಕೂಡ ಈಗ ಏನೂ ತೊಂದರೆ ಇಲ್ಲದಿದ್ದರೂ ಕೂಡ ಮುಂದೆ ಬಾರ್ಡರುಗಳಲ್ಲಿರುವ ರಾಷ್ಟ್ರಗಳಿಂದ ತೊಂದರೆಗಳು ಬರುವ ಸಂಭವ ಉಂಟು. ಎಲ್ಲಿಯವರೆಗೆ ಈ ರಾಜ್ಯವನ್ನು ರಕ್ಷಣೆ ಮಾಡುವುದಕ್ಕಾಗಿ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತಾರೋ ಅಲ್ಲಿಯವರೆಗೆ ಕಷ್ಟಗಳು ನಮಗೆ ಬರುವುದಿಲ್ಲ. ಅಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದರ ಬಗ್ಗೆ ಇದರಲ್ಲಿ ಏನೂ ಹೇಳಿಲ್ಲ ಎಂದು ವಿಷಾದದಿಂದ ಇಲ್ಲಿ ಹೇಳಬೇಕಾಗಿ ಬಂದಿದೆ, ಇದಕ್ಕಾಗಿ ಕೇಂದ್ರ ಸರಕಾರ ಪರ ರಾಜ್ಯಗಳ ಬಗ್ಗೆ ಅನುಸರಿಸುತ್ತಿರುವ ನೀತಿ ಸರಿಯಾದುದಲ್ಲ. ಸರಿಯಾದ ಒಂದು ನೀತಿಯನ್ನು ಅನುಸರಿಸದೆ ಇರುವುದರಿಂದ ಮುಂದೆ ನಮ್ಮ ರಾಷ್ಟ್ರಕ್ಕೆ ಕಷ್ಟ ಪರಿಸ್ಥಿತಿ ಬಂತು ಎಂದರೆ ಅದಕ್ಕಾಗಿ ಪಶ್ಚಾತ್ತಾಪ ಪಡಬೇಕಾಗಿ ಬರುತ್ತದೆ. ಆದುದರಿಂದ ಸಿಕ್ಕಿಂ ರಾಜ್ಯದ ಎಲ್ಲ ಜವಾಬುದಾರಿಗಳನ್ನೂ ಸಂಪೂರ್ಣವಾಗಿ ಹೊರಬೇಕೆಂದು ಹೇಳುತ್ತೇನೆ. ಇಲ್ಲಿ ತಂದಿರುವ ತಿದ್ದುಪಡಿ ಸರಿಯಾದುದಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಇದರ ಬಗ್ಗೆ ಹೆಚ್ಚು ಟೀಕೆ ಮಾಡದೇ ಇದ್ದರೂ ಕೇಂದ್ರ ಸರಕಾರ ಇವೊತ್ತು ಪರ ರಾಜ್ಯಗಳ ಬಗ್ಗೆ ಅನುಸರಿಸುತ್ತಿರುವ ನೀತಿ ನ್ಯಾಯವಾಗಿಲ್ಲ ಎಂದು ಹೇಳಲೇಬೇಕಾಗಿದೆ.

2-30 P.M.

ನಾವು ಚೈನಾ ದೇಶದ ಬಗ್ಗೆ ಸಾಕಷ್ಟು ಎಚ್ಚರಿಕೆಯಿಂದ ಇಲ್ಲದೇ ಹೋದರೆ ಮುಂದೆ ನಾವು ಬಹಳ ಕಷ್ಟಪಡಬೇಕಾದ ಪರಿಸ್ಥಿತಿ ಬರುತ್ತದೆಂದು ಹೇಳುತ್ತೇನೆ. ಈ ಕಾರಣದಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ, ಸಂದರ್ಭ ಬಂದಾಗ ಈ ರಾಷ್ಟ್ರದ ಗಡಿಗಳ ವಿಚಾರದಲ್ಲಿ ತೀವ್ರವಾದಂಥ ಕಾರ್ಯಕ್ರಮ ಕೈಕೊಳ್ಳಬೇಕು ಎಂದು; ಇವೊತ್ತಿನ ಪರಿಸ್ಥಿತಿಯಲ್ಲಿ ಮತ್ತು ಯಾವೊತ್ತಿದ್ದರೂ ಸಹ ಚೈನಾ ದೇಶದವರು ನಮ್ಮ ಶತ್ರುಗಳೇ ಆಗಿದ್ದಾರೆಂಬ ಭಾವನೆ ನನಗಿದೆ. ಈ ಹಿಂದೆ ಆದಂಥ ತಪ್ಪು ಮುಂದೆ ಆಗದಂತೆ ಕೇಂದ್ರ ಸರ್ಕಾರದವರು ನೋಡಿಕೊಳ್ಳಬೇಕು, ಆ ಒಂದು

ಹೊಣೆಗಾರಿಕೆ ಅವರ ಮೇಲಿದೆ ಎಂಬ ಅಂಶವನ್ನು ರಾಜ್ಯಸರ್ಕಾರದವರು ಅವರಿಗೆ ಹೇಳಬೇಕು. ಭೂತಾನ್ ಮತ್ತು ನೇಪಾಳ ದೇಶದವರು ಸಹ ನಮ್ಮ ದೇಶದ ವಿಚಾರದಲ್ಲಿ ಕೆಲವು ವಿಚಾರಗಳಲ್ಲಿ ಸಂಶಯವನ್ನು ವ್ಯಕ್ತಪಡಿಸಿವೆ. ಆ ಸಂಶಯಗಳನ್ನು ಹೋಗಲಾಡಿಸಿ ಅವರೊಡನೆ ಸ್ನೇಹ ಭಾವದಿಂದ ಇರುವುದು ಒಳ್ಳೆಯದೆಂದು ನಾನು ಹೇಳುತ್ತೇನೆ. ಈಗ ತಂದಿರತಕ್ಕಂಥ ೩೮ನೇ ತಿದ್ದುಪಡಿ ಮಸೂದೆಯ ಬಗ್ಗೆ ಚರ್ಚೆ ಮಾಡತಕ್ಕಂಥ ಅಗತ್ಯವಿಲ್ಲವೆಂಬ ಅಂಶ ನನಗೂ ಗೊತ್ತಿದೆ. ಏನಿದ್ದರೂ ಇದಕ್ಕೆ ಒಪ್ಪಿಗೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಮಾತ್ರ ನಾವು ಹೇಳಬೇಕಾಗಿದೆ. ಇದು ಸರಿಯೋ ಅಥವಾ ತಪ್ಪೋ ಎಂದು ಚರ್ಚೆ ಮಾಡುವ ಅವಕಾಶ ಈಗ ಇಲ್ಲ. ಆ ಒಂದು ಅರಿವು ನನಗಿದೆ. ಆದರೆ ನಾನು ರಾಜ್ಯಸರ್ಕಾರದವರಲ್ಲಿ ಇಷ್ಟು ಮಾತ್ರ ಅರಿಕೆ ಮಾಡಿಕೊಳ್ಳುತ್ತೇನೆ; ಏನೆಂದರೆ, ಫೈನಾನ್ಷಿಯಲ್ ಸ್ಟೇಟ್‌ಮೆಂಟ್‌ನಲ್ಲಿ ಮತ್ತು ಅಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಹೇಳಿರುವ ಪ್ರಕಾರ ಇದರಿಂದ ಹಣದ ಖರ್ಚು ಎಷ್ಟು ಬರುತ್ತದೆ ಎಂಬುದು ಗೊತ್ತಿಲ್ಲ., ಈ ಕಾರಣದಿಂದ ನಮ್ಮ ಮೇಲೆ ಹೆಚ್ಚು ಹಣದ ಹೊರೆ ಬೀಳುವ ಸಂದರ್ಭವಿದೆ. ಈ ಒಂದು ಹೊರೆ ಬಹಳ ಕಾಲದವರೆಗೆ ನಮ್ಮ ಮೇಲೆ ಬೀಳದಂತೆ ನೋಡಿಕೊಳ್ಳುವ ಜವಾಬ್ದಾರಿ ಕೇಂದ್ರ ಸರ್ಕಾರದ ಮೇಲಿದೆ. ಅದಕ್ಕಾಗಿ ಕೇಂದ್ರ ಸರ್ಕಾರದವರು ಸಿಕ್ಕಿಂ ಜನತೆಗೆ ಆದಷ್ಟು ಜಾಗ್ರತೆ ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳಲು ಪ್ರಯತ್ನ ಮಾಡಬೇಕು, ತಮ್ಮ ಸ್ವಂತ ಶಕ್ತಿಯಿಂದ ಉತ್ಪಾದನೆಯನ್ನು ಹೆಚ್ಚು ಮಾಡಿ ಸುಖ ಜೀವನವನ್ನು ನಡೆಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ತಿಳಿಸಬೇಕು. ಆ ರೀತಿ ಹೇಳುತ್ತಾರೆಂದು ನಾನು ನಂಬಿಕೊಂಡಿದ್ದೇನೆ. ಇದರ ಜೊತೆಗೆ ಅಲ್ಲಿಯ ಜನತೆ ಚೋಗ್ಯಾಲ್ ಅವರ ರಾಜಮನೆತನವನ್ನು ರದ್ದುಪಡಿಸಬೇಕು ಎಂದು ಹೇಳುತ್ತಿದ್ದಾರೆ. ಆ ವಿಚಾರದಲ್ಲಿ ನನ್ನ ವಿರೋಧವೇನೂ ಇಲ್ಲ., ಆದರೆ ಕೇಂದ್ರ ಸರ್ಕಾರದವರು ಈ ವಿಚಾರದಲ್ಲಿ ನಡೆದುಕೊಳ್ಳುತ್ತಿರುವ ನೀತಿ ಸ್ವಲ್ಪ ಸರ್ವಾಧಿಕಾರದಿಂದ ಕೂಡಿದೆ ಎಂದು ನನಗನ್ನಿಸುತ್ತಿದೆ ಇಂತಹ ವಿಚಾರದಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮೊದಲು ಇಡೀ ರಾಷ್ಟ್ರದ ಅಭಿಪ್ರಾಯವನ್ನು ಮೊದಲು ತೆಗೆದುಕೊಳ್ಳುವುದು ಒಳ್ಳೆಯದು. ಅದಕ್ಕೆ ಬದಲು ಮೊದಲೇ ಒಂದು ತೀರ್ಮಾನ ತೆಗೆದುಕೊಳ್ಳುವುದು ಉತ್ತಮವಲ್ಲವೆಂದು ತಿಳಿಸಿ, ಈ ರೀತಿಯ ವಿಚಾರಗಳಲ್ಲಿ ಕೇಂದ್ರ ಸರ್ಕಾರದವರು ಸ್ವಲ್ಪ ಎಚ್ಚರಿಕೆಯಿಂದ ತೀರ್ಮಾನ ತೆಗೆದುಕೊಂಡು ಕೆಲಸ ಮಾಡಿದರೆ ಚೆನ್ನಾಗಿರುತ್ತದೆ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಧ್ಯಕ್ಷರೇ, ಈ ೩೮ನೇ ತಿದ್ದುಪಡಿ ಮಸೂದೆಯನ್ನು ಸ್ವಾಗತಿಸುತ್ತಾ ಎರಡು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ನಾನು ಇದನ್ನು ಸ್ವಾಗತಿಸುತ್ತಿರುವುದಕ್ಕೆ ಮೊದಲನೆಯ ಕಾರಣವೆಂದರೆ. ನಮ್ಮ ದೇಶದ ಪ್ರಜಾಪ್ರಭುತ್ವಕ್ಕೆ ಈ ಮೂಲಕ ಒಂದು ಜಯ ಲಭಿಸಿದೆ ಎಂಬುದು ನನ್ನ ಅಭಿಪ್ರಾಯ. ಈ ರೀತಿ ನಮ್ಮ ಪ್ರಜಾಪ್ರಭುತ್ವಕ್ಕೆ ಜಯವಾಗಿದ್ದರೆ, ಸಾಮ್ರಾಜ್ಯಷಾಹಿಗಳ ಒಂದು ಪಿತೂರಿಗೆ ಅಪಜಯವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಸಿಕ್ಕಿಂದೇಶದ ೫೦ ಸಹಸ್ರಕ್ಕೂ ಹೆಚ್ಚು ಜನರು ತಮ್ಮ ದೇಶ ಭಾರತದೊಡನೆ ಸೇರಬೇಕು ಎಂದು ಮತ ನೀಡಿದ್ದನ್ನು ನೋಡಿದರೆ ನನಗನ್ನಿಸುತ್ತದೆ, ಅದನ್ನು ನಮ್ಮ ದೇಶದೊಡನೆ ಸೇರಿಸಿಕೊಳ್ಳದೆ ಬೇರೆ ವಿಧಿಯೇ ಇಲ್ಲ ಎಂದು, ಆ ದೇಶದ ಜನರ ಒಂದು ತೀರ್ಮಾನಕ್ಕೆ ಅನುಗುಣವಾಗಿ ಆ ದೇಶವನ್ನು ನಮ್ಮ ದೇಶದೊಡನೆ ಸೇರಿಸಿಕೊಂಡಿದ್ದೇವೆ. ಈಗಾಗಲೇ ನಾವು ಆ ದೇಶದೊಡನೆ ಅನೇಕ ರೀತಿಯ ಸಂಬಂಧ ಬೆಳೆಸಿದ್ದೇವೆ. ಆದರೂ ಸಹ ಇಲ್ಲಿಯವರೆಗೆ ಕೆಲವೊಂದು ಕೆಟ್ಟ ಅವಶೇಷಗಳು ಉಳಿದುಕೊಂಡಿತ್ತು. ಈಗ ಅವುಗಳನ್ನು ಸಹ ಹೋಗಲಾಡಿಸಿ ಹೊಸ ರೀತಿಯೊಳಗೆ ಅಲ್ಲಿಯ ಆಡಳಿತವನ್ನು ನಡೆಸುವುದಕ್ಕೆ ಅನುಕೂಲಮಾಡಿಕೊಡುತ್ತಿದ್ದೇವೆ. ಇದರಿಂದ ಹೆಚ್ಚಿನ ರೀತಿಯಲ್ಲಿ ಪ್ರಜಾಪ್ರಭುತ್ವವನ್ನು ಬೆಳೆಸುವುದಕ್ಕೆ ಅವರಿಗೆ ಅನುಕೂಲವಾಗುತ್ತದೆ. ಈ ಒಂದು ಜವಾಬ್ದಾರಿ ಅಲ್ಲಿಯ ಜನತೆಯ ಮೇಲಿದೆ. ಈ ರೀತಿ ಮಾರ್ಪಾಟಾಗುವುದಕ್ಕೆ ಕಾರಣವಾದರೂ ಏನು ಎಂಬ ಬಗ್ಗೆ ಎರಡು ಮೂರು ಅಂಶಗಳನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ ಯಾರಿಗೂ ತಿಳಿಯದಂತೆ ಒಳಗಿಂದೊಳಗೆ ಈ ರೀತಿಯಾಗುವುದಕ್ಕೆ ಅವಕಾಶ ಕೊಡಬಾರದೆಂದು ಕೆಲವರು ಪಿತೂರಿ ನಡೆಸಿದರು ಆ ದೇಶದೊಡನೆ ಸಂಬಂಧವಿಲ್ಲದವರೂ ಸಹ ಈ ರೀತಿ ಪಿತೂರಿ ನಡೆಸಿದ್ದಾರೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಈ ದೇಶವನ್ನು ಆಳುತ್ತಿದ್ದ ಬ್ರಿಟಿಷ್ ಸಾಮ್ರಾಜ್ಯಷಾಹಿಗಳು ನೇಪಾಳ, ಭೂತಾನ್ ಮತ್ತು ಸಿಕ್ಕಿಂ ದೇಶಗಳು ನಮ್ಮ ದೇಶದೊಡನೆ ಸೇರದಂತೆ ಮಾಡಿದರು. ನಮಗೆ ಸ್ವಾತಂತ್ರ್ಯ ಬಂದಮೇಲೆ, ನಮ್ಮ ದೇಶವು ಈ ಮೂರು ದೇಶಗಳೊಡನೆ ನಿಕಟ ಸಂಬಂಧ ಮತ್ತು ಸಂಪರ್ಕ ಇಟ್ಟುಕೊಳ್ಳಬೇಕೆಂದು ಬಹಳ ಪ್ರಯತ್ನಪಡುತ್ತಾ ಬಂತು. ಈಗಲೂ ಪ್ರಯತ್ನ ಮಾಡುತ್ತಿದೆ. ಆದರೆ ಬ್ರಿಟಿಷ್ ಸಾಮ್ರಾಜ್ಯಷಾಹಿಗಳು ನಮಗೆ ಸ್ವಾತಂತ್ರ್ಯ ಬಂದಮೇಲೂ ಸಹ ಈ ದೇಶಗಳ ಘನತೆ ಗೌರವಗಳನ್ನು ಹೇಗಾದರೂ ಮಾಡಿ ತಮ್ಮ ಒಂದು ಹಿತಕ್ಕೆ ಉಪಯೋಗ ಮಾಡಿಕೊಳ್ಳಬೇಕು ಎಂದು ಪ್ರತಿಗಾಮಿ ಶಕ್ತಿಗಳೊಡನೆ ಸೇರಿಕೊಂಡು ಸಾಕಷ್ಟು ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ಈ ವಿಚಾರದಲ್ಲಿ ಚೋಗ್ಯಾಲರ ಪಾತ್ರ ಏನಿದೆ ಎಂಬುದನ್ನು ನಾವು ಸ್ವಲ್ಪ ವಿಮರ್ಶೆ ಮಾಡಬೇಕಾಗಿದೆ. ಸಿಕ್ಕಿಂನ ಜನತೆ ತಾವು ಪ್ರಜಾಪ್ರಭುತ್ವದ ರೀತಿಯಲ್ಲಿ

ಸರ್ಕಾರ ನಡೆಸಬೇಕು, ಪ್ರಜಾಪ್ರಭುತ್ವಕ್ಕೆ ಮಾನ್ಯತೆ ಕೊಡಬೇಕು ತಮ್ಮ ದೇಶಕ್ಕೂ ಒಂದು ಅಸೆಂಬ್ಲಿ ಇರಬೇಕು, ಅದಕ್ಕೆ ಚುನಾಯಿತ ಪ್ರತಿನಿಧಿಗಳು ಆರಿಸಿ ಬರಬೇಕು ಎಂದು ಯೋಚನೆ ಮಾಡುತ್ತಿದ್ದರೆ, ಚೋಗ್ಯಾಲರು ಮಾತ್ರ ಅದಕ್ಕೆ ವಿರುದ್ಧವಾಗಿ ಮೊದಲಿನಿಂದಲೂ ನಡೆದುಕೊಂಡು ಬಂದರು, ಅವರು ರಾಜಮಹಾರಾಜರವಂಶಕ್ಕೆ ಸೇರಿದವರಾದಕಾರಣ ತಮ್ಮ ಒಂದು ಪಾಳೇಗಾರಿಕೆಯನ್ನು ನಡೆಸಿಕೊಂಡು ಬಂದರು. ಅವರು ಅನುವಂಶಿಕವಾಗಿ ಬಂದಂಥ ಸಾವಿರಾರು ಎಕರೆ ಜಮೀನು ಇಟ್ಟುಕೊಂಡು ನೂರಾರು ರೀತಿಯ ಶೋಷಣೆಗಳನ್ನು ನಡೆಸಿಕೊಂಡು ಬರುತ್ತಿದ್ದರು., ಜೊತೆಗೆ ಸಾವಿರಾರು ಜನರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ರಾಜ್ಯಭಾರ ನಡೆಸುತ್ತಿದ್ದ ಕಾರಣದಿಂದ ತಮ್ಮಲ್ಲಿದ್ದ ಅಧಿಕಾರವನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡುವುದಕ್ಕೆ ಅವರು ತಯಾರಿರಲಿಲ್ಲ., ಇದೇ ಕಾರಣದಿಂದ ಅವರು ತಮ್ಮ ಅಧಿಕಾರ ಬಿಟ್ಟುಕೊಡದೆ ಅದಕ್ಕಾಗಿ ಎಷ್ಟೆಷ್ಟು ಪ್ರಯತ್ನ ಮಾಡಬೇಕೋ ಅಷ್ಟೆಲ್ಲಾ ಪ್ರಯತ್ನ ಮಾಡಿದರು, ನಮಗೆಲ್ಲಾ ಗೊತ್ತಿರುವಂತೆ ೧೯೭೩ನೇ ಇಸವಿಯಲ್ಲಿ ಅವರು ಒಂದು ಒಪ್ಪಂದವನ್ನು ಮಾಡಿಕೊಂಡ ಮೇಲೂ ಸಹ ಪ್ರಜಾಪ್ರಭುತ್ವದ ರೀತಿಯಲ್ಲಿ ಸುಗಮವಾಗಿ ಆಡಳಿತ ನಡೆಸುವುದಕ್ಕೆ ಅವರು ಅಡ್ಡಿ ನಾನಾ ರೀತಿ ಮಾಡಿದರು, ನಾನಾ ರೀತಿಯ ಪಿತೂರಿ ನಡೆಸಿದರು ಇದಕ್ಕೆ ಉದಾಹರಣೆ ಕೊಡಬೇಕೆಂದರೆ, ನೇಪಾಳದ ಮಹಾರಾಜರ ಪಟ್ಟಾಭಿಷೇಕನಡೆದ ಸಂದರ್ಭದಲ್ಲಿ ಇವರು ಅವರ ದೇಶದ ಮುಖ್ಯಮಂತ್ರಿಗಳ ಅನುಮತಿಯನ್ನು ಸಹ ಕೇಳದೆ ನೇರವಾಗಿ ಅಲ್ಲಿಗೆ ಹೋದರು., ಮತ್ತು ತಮ್ಮ ದೇಶದ ಜನತೆಯ ಪರವಾಗಿ ಶುಭಾಶಯ ಸಲ್ಲಿಸಲು ಅವರು ಅಲ್ಲಿಗೆ ಹೋಗಲಿಲ್ಲ, ಅವರು ಹೋದ ಕಾರಣ ಆ ಸಮಯದಲ್ಲಿ ಚೈನಾ ದೇಶದೊಡನೆ ಸಂಪರ್ಕ ಬೆಳೆಸಬೇಕು ಎಂಬ ಕಾರಣದಿಂದ. ಈ ವಿಚಾರ ಪತ್ರಿಕೆಗಳಲ್ಲಿಯೂ ಸಹ ವರದಿಯಾಗಿದೆ. ಈ ರೀತಿ ಭಾರತ ದೇಶದ ಸಂಪರ್ಕವನ್ನು ಬಿಟ್ಟು ಚೈನಾ ದೇಶದ ಸಂಪರ್ಕವನ್ನು ಬೆಳೆಸಿಕೊಂಡು ಆ ಮೂಲಕ ತಮ್ಮ ಒಂದು ಪಾಳೇಗಾರಿಕೆ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗಬೇಕೆಂಬುದೇ ಅವರ ಉದ್ದೇಶವಾಗಿತ್ತು., ಪ್ರತಿಗಾಮಿ ದಿಕ್ಕಿನಲ್ಲಿ ಹೋಗಬೇಕೆಂಬುದೇ ಅವರ ಮುಖ್ಯ ಉದ್ದೇಶವಾಗಿತ್ತು. ಈ ವಿಷಯ ಪತ್ರಿಕೆಗಳಲ್ಲಿ ವರದಿಯಾದ ಮೇಲೆ ಅಲ್ಲಿಯ ಜನರು ಅವರ ವಿರುದ್ಧವಾಗಿ ದಂಗೆ ಎದ್ದರು., ಆ ಸಂದರ್ಭದಲ್ಲಿ ಚೋಗ್ಯಾಲರು ತಮ್ಮ ಅರಮನೆಯಲ್ಲಿ ಶಸ್ತ್ರಾಸ್ತ್ರಗಳನ್ನು ಸಹ ಕೂಡಿಟ್ಟಿದ್ದರು, ಮತ್ತು ರೇಡಿಯೋ ಟ್ರಾನ್ಸ್‌ಮೀಟರನ್ನು ಇಟ್ಟುಕೊಂಡು ಅಮೇರಿಕಾ ದೇಶದೊಡನೆ ಸಂಪರ್ಕ ಬೆಳೆಸಿ ಮಾತುಕತೆ ನಡೆಸುತ್ತಿದ್ದರು, ಅವರು ಅಮೇರಿಕಾ ದೇಶದ ಸಹಾಯ ಪಡೆಯುತ್ತಿದ್ದಾರೆ, ಅವರೊಡನೆ ಸೇರಿಕೊಂಡು ದೊಡ್ಡ ಪಿತೂರಿ ನಡೆಸುತ್ತಿದ್ದಾರೆಂಬುದು ತಿಳಿದುಬಂದಾಗ ಜನರು ದಂಗೆ ಎದ್ದರು. ಅಮೇರಿಕಾ ದೇಶ ಸಾಮ್ರಾಜ್ಯಶಾಹಿ ದೇಶವಾಗಿದೆ. ಮತ್ತು ಭಾರತಕ್ಕೆ ವಿರುದ್ಧವಾಗಿರುವ ಕಾರಣದಿಂದ ಅವರೊಡನೆ ಸೇರಿಕೊಂಡು ತಮ್ಮ ಒಂದು ಪಾಳೇಗಾರಿಕೆ ಪದ್ಧತಿಯನ್ನು ಉಳಿಸಿಕೊಳ್ಳಲು ಪ್ರಯತ್ನ ಮಾಡಿದರು. ಅದಕ್ಕೆ ಸಹಾಯ ಮಾಡಬೇಕೆಂದು ಅವರಲ್ಲಿ ಕಳಕಳಿಯಿಂದ ಮನವಿಯನ್ನು ಸಹ ಮಾಡಿಕೊಂಡರು. ಚೈನಾ ಮತ್ತು ಅಮೇರಿಕಾ ದೇಶದ ಸಹಾಯ ಪಡೆದುಕೊಂಡು ಪ್ರತಿಗಾಮಿ ದಿಕ್ಕಿನಲ್ಲಿ ಆಡಳಿತ ನಡೆಸಬೇಕೆಂದು ಅವರು ಬಹಳವಾಗಿ ಪ್ರಯತ್ನ ಮಾಡಿದರು. ಆದರೆ ಅದಕ್ಕೆ ಅಲ್ಲಿಯ ಜನತೆ ಅವಕಾಶ ಕೊಡಲಿಲ್ಲ., ತಾ॥ ೮-೫-೧೯೭೩ರಲ್ಲಿ ಚೋಗ್ಯಾಲರು ಆ ದೇಶದ ರಾಜಕೀಯ ಪಕ್ಷಗಳ ಜೊತೆಯಲ್ಲಿ ಮತ್ತು ಭಾರತ ಸರ್ಕಾರದ ಜೊತೆಯಲ್ಲಿ ಒಂದು ಒಪ್ಪಂದ ಮಾಡಿಕೊಂಡರು. ಆದರೆ ಅದರಂತೆ ನಡೆದುಕೊಳ್ಳದೆ ಅದಕ್ಕೆ ವಿರುದ್ಧವಾಗಿ ನಡೆದುಕೊಂಡರು., ಮತ್ತು ಸಿಕ್ಕಿಂನ ಆಕ್ಟ್‌ಗೆ ವಿರುದ್ಧವಾಗಿ ನಡೆದುಕೊಂಡರು. ಅವರು ಸಿಕ್ಕಿಂ ಕಾನ್‌ಸ್ಟಿಟ್ಯೂಷನಲ್ ಫಿಗರ್ ಹೆಡ್ ಆಗಿರಬೇಕು, ಎಂದು ಸಿಕ್ಕಿಂ ಆಕ್ಟ್‌ನಲ್ಲಿ ಇದೆ. ಕಾನ್‌ಸ್ಟಿಟ್ಯೂಷನಲ್ ಫಿಗರ್ ಹೆಡ್ ಆಗಿರಬೇಕು. ಅಸೆಂಬ್ಲಿ ನಡೆಸಬೇಕು, ಪ್ರಜಾಪ್ರಭುತ್ವಕ್ಕೆ ದಾರಿ ಮಾಡಬೇಕು ಎಂದು ಅವರು ಒಪ್ಪಿಕೊಂಡಿದ್ದರೂ ಸಹ ಅದಕ್ಕೆ ವಿರುದ್ಧವಾಗಿ ಅವರು ತಮ್ಮತಮ್ಮನನ್ನು ಅಮೆರಿಕಾ ಸಾಮ್ರಾಜ್ಯಶಾಹಿಗೆ ಪಿತೂರಿ ನಡೆಸಲು ಕಳಿಸಿದರು ಮತ್ತು ತಮ್ಮ ಅಮೇರಿಕಾಹೆಂಡತಿಯನ್ನು ಅಮೆರಿಕಾ ಸಾಮ್ರಾಜ್ಯ ಶಾಹಿಗಪಿತೂರಿ ನಡೆಸಲುಕಳುಹಿಸಿದರು ಇದೆಲ್ಲವನ್ನೂ ಮಾಡಿ ಅಲ್ಲಿ ಪಾಳೆಗಾರಿಕೆಯನ್ನು ಉಳಿಸಬೇಕು ಎಂದು ಪ್ರಯತ್ನ ಪಟ್ಟರು, ಅದೃಷ್ಟವಶಾತ್ ಚೈನಾ ದೇಶದ ಪಿತೂರಿಯಾಗಲೀ, ಬೇರೆ ಯಾವ ಪಿತೂರಿಯಾಗಲೀ ಉಳಿಯಲಿಲ್ಲ, ನಡೆಯಲಿಲ್ಲ. ಚೋಗ್ಯಾಲ್‌ರವರು ರೆಫರ್ಯಾಂಡಂ ಮಾಡಿದ್ದರ ಬಗ್ಗೆ ಮಾತನಾಡುತ್ತಾ 'Another farce show created by India to unearth Sikkim' ಎಂದು ಹೇಳಿದ್ದಾರೆ. ಅಮೇಲೆ ಚೌ-ಎನ್-ಲೈ ಅವರು ಡಿಸೆಂಬರ್ ೧೯೬೦ ರಲ್ಲಿ China fully recognises special relationship with Sikkim ಎಂದು ಹೇಳಿದರು. They wanted to fish in troubled waters. They wanted Sikkim as part of China. Sikkim decided in a particular manner. ಚೋಗ್ಯಾಲರ ವಾದವಿನಿದೆ ಅದು ಪ್ರಜಾಪ್ರಭುತ್ವಕ್ಕೆ ವಿರೋಧವಾದ ವಾದ ಅದಕ್ಕೆ ಬೆಂಬಲ ಕೊಡದೆ ಇರುವುದಕ್ಕೆ ಸಿಕ್ಕಿಂ ಜನ ಮುಂದೆ ಬಂದಿರುವುದು ಒಳ್ಳೆಯದು ಎಂದು ಹೇಳಬೇಕಾಗಿದೆ ಈ ಪ್ರತಿಗಾಮಿಗಳ ಬಗ್ಗೆ ನಾವು ಎಚ್ಚರಿಕೆ ವಹಿಸಬೇಕಾಗಿದೆ. ಪತ್ರಿಕೆಯಲ್ಲಿ ಬಂದಿರುವ ವರದಿ ಪ್ರಕಾರ

ಅವರು ಇದನ್ನು ಅಂತರರಾಷ್ಟ್ರೀಯ ಪ್ರಶ್ನೆಯಾಗಿ ಮಾಡುವುದಕ್ಕೆ ಪ್ರಯತ್ನಪಟ್ಟರು. ಚೋಗ್ಯಾಲ್‌ರವರು ತಮ್ಮ ಪತ್ನಿ ಮತ್ತು ತಮ್ಮ ಮಾತ್ರವಲ್ಲಅಮೇರಿಕಾ ಸಾಮ್ರಾಜ್ಯಶಾಹಿಗಳು ಪ್ರತಿಗಾಮಿಗಳು ಭಾರತಕ್ಕೆ ವಿರೋಧಿಗಳೂ ಸಹ ಇದನ್ನು ಅಂತರರಾಷ್ಟ್ರೀಯ ಪ್ರಶ್ನೆಯನ್ನಾಗಿ ಮಾರ್ಪಾಡು ಮಾಡುವುದಕ್ಕೆ ಪ್ರಯತ್ನಪಟ್ಟರು. ಅಂತರರಾಷ್ಟ್ರೀಯ ಪ್ರತಿಗಾಮಿಗಳು ರಾಷ್ಟ್ರೀಯ ಪ್ರತಿಗಾಮಿಗಳು ಇಬ್ಬರೂ ಸೇರಿ ಸಿಕ್ಕಿಂನಲ್ಲಿ ಪ್ರಜಾಪ್ರಭುತ್ವದಕೊಲೆಮಾಡಿ ರಾಜಮಹಾರಾಜ ಪದ್ಧತಿಯನ್ನು ಆನುವಂಶಿಕ ಪದ್ಧತಿಯನ್ನುಉಳಿಸಬೇಕು ಎಂದು ಪ್ರಯತ್ನ ಪಟ್ಟರು ಆ ಪ್ರಯತ್ನಕ್ಕೆ ಈ ತೀರ್ಮಾನದಿಂದ ಕೊಡಲಿಪೆಟ್ಟು ಬಿದ್ದಂತಾಗಿದೆ ಅಮೇರಿಕಾ ಸಾಮ್ರಾಜ್ಯಶಾಹಿಗಳ ಪಿತೂರಿ ಬಗ್ಗೆ ನಾವು ಎಚ್ಚರಿಕೆಯನ್ನು ವಹಿಸಬೇಕಾಗಿದೆ. ಸಿಕ್ಕಿಂದಲ್ಲಿ ನಡೆದಂಥ ಘಟನೆಯನ್ನು ತಿಳಿದುಕೊಂಡರೆ ಪಾಠ ಕಲಿಯಬಹುದು. This Internationalisation of the issue. ಸಾಮ್ರಾಜ್ಯಶಾಹಿಗಳು ಹೊರಗಡೆ ಒಳಗಡೆ ಇಬ್ಬರೂ ಸೇರಿ ಹೇಗಾದರೂ ಮಾಡಿ ಪ್ರಜಾಪ್ರಭುತ್ವವನ್ನು ಅಳಿಸಬೇಕು ಎಂಬ ನೀತಿ ನಮ್ಮ ದೇಶದಲ್ಲಿ ನಡೆಯುತ್ತಾ ಇದೆ. ಇದರ ಬಗ್ಗೆ ನಾವು ಎಚ್ಚರಿಕೆಯಿಂದ ಇರಬೇಕು ಎಂದು ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಅಮೇರಿಕಾ ಸಾಮ್ರಾಜ್ಯಶಾಹಿಯ ಪಿತೂರಿ ಬಹಳ ದೊಡ್ಡದಾಗಿ ನಡೆಯುತ್ತಾ ಇದೆ. ಅರಬ್ ರಾಷ್ಟ್ರಗಳನ್ನು ಹೆದರಿಸುತ್ತಿದ್ದರು. ಅದೇ ಪ್ರಯತ್ನವನ್ನು ಇವತ್ತಿನದಿವಸ ಸಿಕ್ಕಿಂನಲ್ಲಿ ಮಾಡಿದ ಹಾಗೆ ಅಮೇರಿಕಾ ನಮ್ಮದೇಶದಲ್ಲಿ ಮಾಡುತ್ತಿತ್ತು. ಹೊರಗಡೆ ಪ್ರತಿಗಾಮಿ ಶಕ್ತಿಗಳು, ಪಟ್ಟಭದ್ರಹಿತಾಶಕ್ತಿಗಳು, ಬಂಡವಾಳಗಾರರು, ಜಮೀನ್‌ದಾರರ ಪರವಾಗಿರುವವರು ಎಲ್ಲರೂ ಸೇರಿ ಇಲ್ಲಿ ಪ್ರಜಾಪ್ರಭುತ್ವವನ್ನು ಉರುಳಿಸಬೇಕು ಎಂದು ಪ್ರಯತ್ನಪಟ್ಟರು ಆದರೆ ಅದು ಯಾವುದೂ ನಡೆಯಲಿಲ್ಲ. ಪ್ರತಿಗಾಮಿ ಸಾಮ್ರಾಜ್ಯಶಾಹಿಗಳ ಪರವಾಗಿರುವ ಶಕ್ತಿಗಳನ್ನು ಮಟ್ಟಹಾಕಬೇಕು, ಅದಕ್ಕೆ ಕಂಕಣಬದ್ಧರಾಗಬೇಕು.

ಕಡೆಯಂದಾಗಿ ಈ ನಿರ್ಣಯ ಏನಿದೆ, ಅದನ್ನು ಸ್ವಾಗತಿಸುತ್ತೇನೆ ಭಾರತದ ಪಾರ್ಲಿಮೆಂಟ್‌ನಲ್ಲಿ ಸಿಕ್ಕಿಂನ ಜನ ಒಬ್ಬರು ಸದಸ್ಯರು ಇರುತ್ತಾರೆ. ಅವರ ಸರ್ಕಾರದವರೂ ಇರುತ್ತಾರೆ. ಭಾರತ ಸರ್ಕಾರದ ಅಂತರರಾಷ್ಟ್ರೀಯ ನೀತಿ ಬಗ್ಗೆ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ ಭಾರತ ದೇಶದ ಅಂತರರಾಷ್ಟ್ರೀಯ ನೀತಿ ಏನಿದೆ ಅದು ಸರಿಯಾದಂಥ ನೀತಿ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಇದರ ಬಗ್ಗೆ ಶ್ರೀಮಾನ್ ಶಾಮಣ್ಣನವರು ಏನು ಹೇಳಿದ್ದಾರೆ ಅದನ್ನು ನಾನು ಪೂರ್ಣವಾಗಿ ವಿರೋಧಿಸಬೇಕಾಗಿದೆ. ಭಾರತದ ಅಂತರರಾಷ್ಟ್ರೀಯ ನೀತಿ ಪ್ರಪಂಚದಲ್ಲೇ ಶ್ಲಾಘನೆ ಪಡೆದಂಥ ನೀತಿ. ನಾನು ತಿಳಿದುಕೊಂಡಿರುವ ಹಾಗೆ ಸಾಮ್ರಾಜ್ಯ ಶಾಹಿಗಳು ಎಲ್ಲೆಲ್ಲಿ ಇದ್ದಾರೆ, ಅವರನ್ನು ಇದರಿಂದ ಹೆದರಿಸುತ್ತಿದ್ದೇವೆ. ಬಾಂಗ್ಲಾ ದೇಶದ ಜನತೆ ನಮ್ಮ ಬೆಂಬಲ ಪಡೆದು ಪಾಕಿಸ್ತಾನದವರನ್ನು ಎದುರಿಸಿದರು. ಅವರು ಜಯಗಳಿಸುವುದಕ್ಕೆ ಇದೇ ಕಾರಣವಾಗಿದೆ ಅಮೇರಿಕಾ ಸಾಮ್ರಾಜ್ಯಶಾಹಿಯಾಗಲಿ, ಬೇರೆ ಸಾಮ್ರಾಜ್ಯಶಾಹಿಯನ್ನಾಗಲೀ ಎದುರಿಸಬೇಕು ಎನ್ನುವುದಕ್ಕೆ ನಾನು ನಮ್ಮ ಪಕ್ಷ ಬೆಂಬಲ ನೀಡುತ್ತದೆ. ಸಿಕ್ಕಿಂ ಜನತೆಯಲ್ಲಿ ಪ್ರಜಾಪ್ರಭುತ್ವ ದೃಷ್ಟಿಕೋನ ಬೆಳೆಯುವ ಹಾಗೆ ಮಾಡಬೇಕು. ಪಾಳೆಗಾರಿಕೆ ಅನುವಂಶಿಕ ಪದ್ಧತಿಗಳು ಏನು ಸಿಕ್ಕಿಂನಲ್ಲಿವೆ ಅದನ್ನು ಹೋಗುವ ಹಾಗೆ ನಾವು ಕಾರ್ಯಕ್ರಮ ತೆಗೆದುಕೊಳ್ಳಬೇಕು. ಭೂಸುಧಾರಣೆ ಕಾರ್ಯಕ್ರಮ ತೆಗೆದುಕೊಳ್ಳಬೇಕು, ಅಲ್ಲಿನ ಜನತೆಯನ್ನು ರಕ್ಷಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು, ಎಂದು ಹೇಳಿ ಈ ನಿರ್ಣಯಕ್ಕೆ ಸಂಪೂರ್ಣವಾದ ಬೆಂಬಲಕೊಟ್ಟು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ. (ಸಾಗರ)—ಮಾನ್ಯ ಅಧ್ಯಕ್ಷರೇ, ಈ ಒಂದು ಸಿಕ್ಕಿಂ ರಾಜ್ಯವನ್ನು ಭಾರತದ ಗಣರಾಜ್ಯದಲ್ಲಿ ಸೇರಿಸತಕ್ಕಂಥ ಒಂದು ಐತಿಹಾಸಿಕ ಘಟನೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಬಹುಶಃ ಭಾರತ ರಾಜಕಾರಣಿಗಳು ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಒಂದು ಉತ್ತಮವಾದ ಮುತ್ಸದ್ದಿತನ ಮಾಡಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಹುದು. ಅಷ್ಟೆ ಅಲ್ಲಾ ಈ ಸಂದರ್ಭದಲ್ಲಿ ಹಿಂದುಳಿದಿರತಕ್ಕ ಮತ್ತು ಸಾಮ್ರಾಜ್ಯಶಾಹಿ ಅಥವಾ ಪಾಳೆಗಾರಿಕೆ ಪದ್ಧತಿಯ ಶೋಷಣೆಯಲ್ಲಿದ್ದಂಥ ಆ ಒಂದು ಜನರನ್ನು ವಿಮುಕ್ತರನ್ನಾಗಿ ಮಾಡಿ, ಅವರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುವುದಕ್ಕೆ ಅವಕಾಶ ಮಾಡತಕ್ಕಂಥ ಒಂದು ಚರಿತ್ರಾರ್ಹ ಹಿನ್ನೆಲೆಯನ್ನು ನಾವು ನೆನಪಿಗೆ ತಂದುಕೊಳ್ಳುವುದು ಬಹಳ ಒಳ್ಳೆಯದು. ವಿಶ್ಲೇಷಣೆ ಮಾಡಿರತಕ್ಕ ಜನರು, ವಿಚಾರವಂತರು, ಸಿಕ್ಕಿಮಿನ ಸಾಮ್ರಾಜ್ಯಶಾಹಿಯನ್ನು ಅಂತ್ಯಗೊಳಿಸಬೇಕಾದರೆ ಸಿಕ್ಕಿಮಿನ ಯುವಜನಾಂಗ ಆದರಲ್ಲೂ ಕೂಡ ಭಾರತ ದೇಶದಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಅಲ್ಲಿಗೆ ಹೋದ ಮೇಲೆ ಒಂದು ಹೊಸ ಚೈತನ್ಯವನ್ನು. ಒಂದು ಹೊಸ ವಾತಾವರಣವನ್ನು ಸೃಷ್ಟಿ ಮಾಡಿದರು. ಅಲ್ಲಿರತಕ್ಕ ಸಾಮ್ರಾಜ್ಯಶಾಹಿ ನಿವೃತ್ತಿಯಾಗಬೇಕು, ಆ ರಾಜ್ಯ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸೇರಿಹೋಗಬೇಕು ಎಂದು ಅಲ್ಲಿನ ಯುವ ಜನಾಂಗ ನಿಶ್ಚಯಮಾಡಿ ಒಂದು ಹೊಸ ವಾತಾವರಣವನ್ನು ನಿರ್ಮಾಣ ಮಾಡಿದರು. ಇದರಿಂದ ಸಿಕ್ಕಿಮಿನ ರಾಜಕಾರಣಿಗಳು ಈ ದಿಶೆಯಲ್ಲಿ ಚಿಂತನೆ ಮಾಡಲಿಕೆ ಸಹಾಯ ಮಾಡಿತು ಎನ್ನುವ ಕಾರಣಕ್ಕಾಗಿ ಸಿಕ್ಕಿಂ ರಾಜ್ಯದ

ವಿದ್ಯಾವಂತ ಯುವ ಜನಾಂಗವನ್ನು ನಾವು ಸ್ವಾಗತಮಾಡಬೇಕು. ಇಂತಹ ಒಂದು ಚರಿತ್ರಾರ್ಹ ನಿರ್ಣಯ ಆಗಬೇಕಾದರೆ, ಅವರ ಶ್ರಮ ಹೋರಾಟ ಮತ್ತು ಅವರ ವಿಚಾರ ಬಹಳಮುಖ್ಯವಾಗಿ ಇದಕ್ಕೆ ಕಾರಣವಾಗಿದೆ. ಎಂದು ನಾವು ನೆನಪಿಗೆ ತಂದುಕೊಳ್ಳಬೇಕು, ಅದನ್ನು ಚರಿತ್ರೆಯಲ್ಲೂ ಉಳಿಸಿಕೊಳ್ಳಬೇಕು. ಜೊತೆಗೆ ಇಂತಹ ಒಂದು ಸಾಹಸ ಮಾಡಿ, ಸಣ್ಣ ರಾಜ್ಯವಾದರೂ ಕೂಡ ಅಲ್ಲಿರತಕ್ಕ ಜನರು ಸರ್ವ ಪ್ರಯತ್ನವನ್ನೂ ಮಾಡಿ, ಇನ್ನೂ ಸಾಮ್ರಾಜ್ಯಶಾಹಿ ಉಳಿಯಬೇಕು ಇನ್ನೂ ಪಾಳೆಗಾರಿಕೆ ಉಳಿಯಬೇಕು ಎಂದು ಪ್ರತಿಗಾಮಿ ಶಕ್ತಿಗಳು ಪ್ರಯತ್ನ ನಡೆಸಿದರೂ ಕೂಡ ಅದೆಲ್ಲವನ್ನೂ ಕಿತ್ತೊಗೆದು, ಇವತ್ತು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸೇರಿಹೋಗತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ಇದಕ್ಕಾಗಿ ಆ ಜನರನ್ನು ಮೆಚ್ಚಿಕೊಳ್ಳಬೇಕು. ಈರೀತಿ ಮೆಚ್ಚಿಕೊಳ್ಳುವಾಗ ಆರ್ಥಿಕವಾಗಿ ಅವರಿಗೆ ಎಲ್ಲಾ ತರಹದ ಪ್ರೇರೇಪಣೆ, ಸಹಾಯ ಆಗಬೇಕಾಗುತ್ತದೆ. ಸಿಕ್ಕಿಂ ಸಣ್ಣ ರಾಜ್ಯ, ಅದು ಗಡಿಯಲ್ಲಿದೆ. ದಿವಂಗತ ನೆಹರೂರವರು ಇದ್ದಾಗ ಟಿಬೆಟ್‌ನ್ನು ಕಳೆದುಕೊಂಡೆವು. ಡಾಕ್ಟರ್ ಲೋಹಿಯ ಅವರು ಇದರ ಪ್ರತಿಪಾದನೆ ಮಾಡಿದರು ಅವರು ಹಿಮಾಲಯನ್ ಥಿಯರೀ ಎಂಬ ದೊಡ್ಡ ಪುಸ್ತಕವನ್ನು ಬರೆದು ಇಟ್ಟರು, ಇವತ್ತು ಸಿಕ್ಕಿಮನ್ನು ಭಾರತಕ್ಕೆ ಅನಿವಾರ್ಯವಾಗಿ ಸೇರಿಸಿಕೊಳ್ಳತಕ್ಕ ಪ್ರಸಂಗ ಬಂತು. ನಾವು ಮಾಡಿದ್ದಕ್ಕಿಂತ ಹೆಚ್ಚಿಗೆ ಆ ಸಿಕ್ಕಿಂನ ಯುವಜನಾಂಗ ಇದನ್ನು ಮಾಡಿದ್ದು ಎಂಬುದನ್ನು ನಾವು ನೆನಪಿಗೆ ತಂದುಕೊಳ್ಳಬೇಕು ಮತ್ತು ಈ ಸಂದರ್ಭದಲ್ಲಿ ಸಿಕ್ಕಿಂ ರಾಜ್ಯವನ್ನು ನಮ್ಮ ರಾಜ್ಯದಲ್ಲಿ ಸೇರಿಸಿಕೊಳ್ಳತಕ್ಕಂಥ ಒಂದು ಉತ್ತಮವಾದ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇಲ್ಲಿ ಒಂದು ವಿಷಯವನ್ನು ಹೇಳಬೇಕೆಂದರೆ ಸಿಕ್ಕಿಂನ ಜನರು ಅಲ್ಲಿರತಕ್ಕ ಚುನಾಯಿತ ಪ್ರತಿನಿಧಿಗಳು ಒಮ್ಮತದಿಂದ ತೀರ್ಮಾನ ಮಾಡಿ ತಮ್ಮನ್ನು ಭಾರತರಲ್ಲೆ ಸೇರಿಸಿಕೊಳ್ಳಬೇಕೆಂದು ತೀರ್ಮಾನ ಮಾಡಿದ್ದಾರೆ ಈ ತೀರ್ಮಾನದ ತದನಂತರ ಬಂದಿರತಕ್ಕ ಈ ರಾಜ್ಯಾಂಗ ತಿದ್ದುಪಡಿ. ಈ ತಿದ್ದುಪಡಿಯನ್ನು ಮಾಡತಕ್ಕ ಕಾಲದಲ್ಲಿ ರಾಜ್ಯಪಾಲರಿಗೆ ಒಂದು ವಿಶೇಷವಾದಂಥ ಅಧಿಕಾರವನ್ನು ಕೊಟ್ಟಿದ್ದೇವೆ. ಈ ರಾಜ್ಯಪಾಲರಿಗೆ ಅಂಥ ಒಂದು ಅಧಿಕಾರವನು ಕೊಡತಕ್ಕಂಥಾದ್ದು ಸಮಂಜಸವೇ ಎಂಬುದನ್ನು ನೋಡಬೇಕು. ಅಲ್ಲೆ ಚುನಾಯಿತ ಸರ್ಕಾರ ಇದೆ. ಚುನಾಯಿತ ಪ್ರತಿನಿಧಿಗಳೂ ಕೂಡ ಆ ಸರ್ಕಾರದಲ್ಲಿ ಇದ್ದಾರೆ. ಈ ರಾಜ್ಯಾಂಗ ತಿದ್ದುಪಡಿ ಆದಮೇಲೆ, ಪ್ರಜಾ ಪ್ರಭುತ್ವ ಅಸ್ತಿತ್ವಕ್ಕೆ ಬಂದಮೇಲೆ ಅಲ್ಲಿರತಕ್ಕ ರಾಜ್ಯಪಾಲರಿಗೆ ಇಂಥಾ ಒಂದು ವಿಶೇಷವಾದಂಥ ಅಧಿಕಾರವನ್ನು ಕೊಡಬಾರದು ಎಂಬುದು ನಮ್ಮ ಒಂದು ಪ್ರಬಲವಾದಂಥ ವಿರೋಧ. ಆ ಜನರ ಅಭಿಪ್ರಾಯಕ್ಕೆ ಮನ್ನಣೆಯನ್ನು ಕೊಡಬೇಕೆಂದು ಒಂದು ಸದುದ್ದೇಶವನ್ನು ಇಟ್ಟುಕೊಂಡು ಈ ರಾಜ್ಯಾಂಗವನ್ನು ತಿದ್ದುಪಡಿ ಮಾಡುವುದಕ್ಕೆ ಹೊರಟ್ಟಿದ್ದೇವೆ. ಅದೇ ಸದುದ್ದೇಶದಿಂದ ಅಲ್ಲಿನ ಪ್ರಜಾ ಪ್ರಭುತ್ವಕ್ಕೆ, ಪ್ರಜೆಗಳಿಗೆ ಅವರ ಮಾತಿಗೆ ಅಥವಾ ಅವರ ತೀರ್ಮಾನಕ್ಕೆ ನಾವು ಬೆಲೆಯನ್ನು ಕೊಡಬೇಕು. ಎನ್ನುವ ದೃಷ್ಟಿಯಿಂದ ಆ ಚುನಾಯಿತ ಸರ್ಕಾರಕ್ಕೆ ನಾವು ಅವಕಾಶವನ್ನು ಕೊಡಬೇಕಾಗಿತ್ತು. ಆದರೆ ಅದನ್ನು ಮಾಡದೇ ಇರತಕ್ಕದ್ದು ಕೇಂದ್ರ ಸರ್ಕಾರಕ್ಕೆ ಸರಿಯಲ್ಲವೆಂದು ಹೇಳಬಯಸುತ್ತೇನೆ. ಅವರು ಏನು ಇವತ್ತು ನಮ್ಮ ಜೊತೆಯಲ್ಲಿ ಸೇರಿಕೊಳ್ಳುವುದಕ್ಕೆ ಮುಕ್ತ ಕಂಠದಿಂದ ಮುಂದೆ ಬಂದಿದ್ದಾರೆ ಅಷ್ಟೇ ಪ್ರಾಮಾಣಿಕತೆಯಿಂದ ಅಲ್ಲಿರತಕ್ಕ ಚುನಾಯಿತ ಸರ್ಕಾರಕ್ಕೆ ಎಲ್ಲಾ ಅವಕಾಶಗಳನ್ನೂ ಮಾಡಿಕೊಡಬೇಕು. ನಮ್ಮ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಎಲ್ಲಾ ರಾಜ್ಯ ಸರ್ಕಾರಗಳೂ ಕೂಡ ಸಾಮಾಜಿಕ ಕ್ಷೇತ್ರದಲ್ಲಾಗಲಿ, ಆರ್ಥಿಕ ಕ್ಷೇತ ದಲ್ಲಾಗಲಿ, ಅಥವಾ ಬೇರೆ ಯಾವುದೇ ಕ್ಷೇತ್ರದಲ್ಲಾಗಲಿ ಎಲ್ಲ ಜವಾಬ್ದಾರಿಗಳನ್ನೂ ಕೂಡ ಅವರೇ ನಿರ್ವಹಿಸಿಕೊಂಡು ಹೋಗುವಂತೆ ಮಾಡಿದ್ದರೆ ಬಹುಶಃ ಅಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಬರುವುದಕ್ಕೆ ಅವಕಾಶ ಇತ್ತು ಎಂಬುದನ್ನು ನಾನು ಹೇಳಬಯಸುತ್ತೇನೆ, ಭಾರತ ರಾಜ್ಯಾಂಗದಲ್ಲಿ ಸೇರಿಕೊಳ್ಳುವುದಕ್ಕೆ ಸಿಕ್ಕಿಂನ ಜನ ಎಷ್ಟು ವಿಶ್ವಾಸವನ್ನು ಇಟ್ಟು ಕೊಂಡಿದ್ದಾರೋ ಅಷ್ಟೇ ವಿಶ್ವಾಸವನ್ನು ಚುನಾಯಿತ ಪ್ರತಿನಿಧಿಗಳ ಮೇಲೆ ಇಡಬೇಕಾಗಿತ್ತು. ಆದರೆ ಈಗ ಇದನ್ನು ನೋಡಿದರೆ ಸರ್ಕಾರದ ಮೇಲೆ, ಅಥವಾ ಚುನಾಯಿತ ಪ್ರತಿನಿಧಿಗಳ ಮೇಲೆ ಒಂದು ರೀತಿಯ ಹಿಂಭಾಗಿಲಿನಿಂದ ಹಿಡಿತವನ್ನು ಇಟ್ಟು ಕೊಳ್ಳುವುದಕ್ಕೆ ಮಾಡಿದ ಪ್ರಯತ್ನವೆಂದು ನಾವು ತಿಳಿದುಕೊಳ್ಳಬೇಕಾಗಿದೆ. ಇವತ್ತು ಆ ಜನರನ್ನು ಮತ್ತು ಚುನಾಯಿತ ಸರ್ಕಾರವನ್ನು ಶಂಕೆಯಿಂದ ನೋಡತಕ್ಕ ಅಭಿಪ್ರಾಯ ಇವತ್ತು ಕಾಣುತ್ತಿದೆ. ಸಂಶಯದಿಂದ ನೋಡತಕ್ಕ ಅಭಿಪ್ರಾಯ ಕಂಡುಬರುತ್ತಿದೆ. ಇದು ಸರಿಯಲ್ಲ. ಆದುದರಿಂದ ನಾನು ಹೇಳುವುದೇನೆಂದರೆ ಈ ರಾಜ್ಯಪಾಲರಿಗೆ ಏನು ಅಧಿಕಾರವನ್ನು ಕೊಟ್ಟಿದ್ದೇವೆ ಅದನ್ನು ಈಗಲೂ ಕೂಡ ಕಿತ್ತು ಹಾಕಿ ಅದೇ ಅಧಿಕಾರವನ್ನು ಸಿಕ್ಕಿಂ ಸರ್ಕಾರಕ್ಕೆ ಕೊಡಬೇಕು ಎಂದು.

ಮಾನ್ಯ ಅಧ್ಯಕ್ಷರೇ, ಸಿಕ್ಕಿಂ ಪ್ರದೇಶದಲ್ಲಿ ಇರತಕ್ಕಂಥ ಜನರು ಬಹಳ ಹಿಂದುಳಿದ ಜನಗಳು ಆ ಪ್ರದೇಶ ಬಹಳ ಹಿಂದುಳಿದ ಪ್ರದೇಶ. ಅಲ್ಲಿನ ಜನರ ಜೀವನ ಮುಖ್ಯವಾಗಿ ವ್ಯವಸಾಯದಿಂದ ಆಗಬೇಕಾಗಿದೆ ಬೇರೆ ಬೇರೆ ಭಾಗಗಳಿಂದ ಬಂದಿರತಕ್ಕ ಜನರು ಅಲ್ಲಿದ್ದಾರೆ. ಅಲ್ಲಿ ಅನೇಕ ಪಂಗಡದ ಜನರಿದ್ದಾರೆ, ಅವರಲ್ಲಿ ಅನೇಕ ಅಂತರಗಳಿವೆ. ಅಲ್ಲಿ ಏನು ಈ ಅಂತರಗಳಿವೆ ಅವುಗಳನ್ನೆಲ್ಲಾ ತೊಡೆದು ಹಾಕಿ ಒಂದು ಹೊಸ ವ್ಯವಸ್ಥೆಯನ್ನು ಮಾಡುವುದಕ್ಕೆ ನಾವು ಪ್ರಾಮಾಣಿಕವಾದ ಪ್ರಯತ್ನವನ್ನು ನಡೆಸಬೇಕು. ನಮ್ಮಲ್ಲೆ

ಹಿಂದೆ ಇದ್ದ ರಾಜರು ಹೋದರು, ಹೊಸ ರಾಜರು ಅವರ ಜಾಗಕ್ಕೆ ಬಂದರು. ಹಿಂದೆ ಇದ್ದ ರಾಜರು ಮಾಡುತ್ತಿದ್ದ ದರ್ಬಾರುಗಳಿಗೂ ಈಗಿನ ಮಂತ್ರಿಗಳು ಮಾಡುತ್ತಾ ಇರತಕ್ಕ ದರ್ಬಾರುಗಳಿಗೂ ಯಾವುದೇ ವ್ಯತ್ಯಾಸ ಇಲ್ಲ. ನಮ್ಮಲ್ಲಿ ರಾಜ್ಯಷಾಹಿ ಹೋದರೂ ಆ ರಾಜ್ಯಷಾಹಿಯ ಮನೋಭಾವ ಮಾತ್ರ ಇನ್ನೂ ಹೋಗಿಲ್ಲ. ಇವತ್ತು ಚೋಗ್ಯಾಲರವರು ರಾಜ್ಯಷಾಹಿಯಲ್ಲಿ ಸುಖ ಸಂತೋಷವನ್ನು ಪಟ್ಟವರು. ಅಂಥವರು ಒಂದೇ ಸಾರಿ ಎಲ್ಲವನ್ನೂ ಬಿಟ್ಟುಕೊಡುವುದಕ್ಕೆ ಹಿಂದುಮುಂದು ನೋಡುವುದು ಸ್ವಾಭಾವಿಕ ವಾಗಿದೆ. ನಮ್ಮಲ್ಲಿ ಇರತಕ್ಕ ಚುನಾಯಿತ ಪ್ರತಿನಿಧಿಗಳು ರಾಜಷಾಹಿ ವ್ಯವಸ್ಥೆಯಲ್ಲಿ ಅನುಭವಿಸುತ್ತಾ ಇರತಕ್ಕ ಎಲ್ಲಾ ಭೋಗಗಳನ್ನೂ ಅನುಭವಿಸುವುದಕ್ಕೆ ಮತ್ತು ಅದನ್ನು ಮುಂದುವರಿಸಿಕೊಂಡು ಹೋಗು ವುದಕ್ಕೆ ಪ್ರಯತ್ನ ಪಡಲಿಲ್ಲವೆ ? ಇವತ್ತೂ ಕೂಡ ರಾಜ್ಯಪಾಲರು ಬರುವಾಗ ನಾವು ರೆಡ್ ಕಾರ್ಪೆಟ್ ಹಾಕುವುದಿಲ್ಲವೆ ? ಅದು ರಾಜಷಾಹಿಯ ಕುರುಹು. ಅವರ ಹಿಂದೆ ಯಾವಾಗಲೂ ಒಬ್ಬ ಗಾರ್ಡ್ ನಿಂತೇ ಇರಬೇಕು. ಅದೂ ಕೂಡ ರಾಜಷಾಹಿಯ ಕುರುಹು ಅಲ್ಲವೆ ?

ಶ್ರೀ ಡಿ. ದೇವರಾಜ ಅರಸ್.—ಹಿಂದಿನಿಂದ ಬಂದಿರುವುದನ್ನು ಬಿಡಬಾರದು

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಹನುಮಂತಯ್ಯನವರು ಮುಖ್ಯ ಮಂತ್ರಿಗಳಾಗಿದ್ದ ಕಾಲ ದಲ್ಲಿ ಅಠಾರಾ ಕಛೇರಿಗೆ ಅವರು ಬರಬೇಕಾದರೆ ಅವರ ಹಿಂದುಗಡೆಯಲ್ಲಿ ಒಂದು ಗಧೆಯನ್ನು ತೆಗೆದು ಕೊಂಡು ಬರುತ್ತಿದ್ದರು. ಇದರ ಬಗ್ಗೆ ಮಾನ್ಯ ಕಿಡಿ ಶೇಷಪ್ಪನವರು ಪೇಪರ್‌ನಲ್ಲಿ ಬರೆದರು ಮಾನ್ಯ ಗೋಪಾಲಗೌಡರು ಈ ಪದ್ಧತಿಯನ್ನು ಪ್ರಬಲವಾಗಿ ವಿರೋಧ ಮಾಡಿದರು. ಅವೆಲ್ಲಾ ರಾಜಷಾಹಿಯ ಕುರುಹು ಎಂದು ಪ್ರತಿಭಟನೆ ಮಾಡಿದ ಮೇಲೆ ಮಾನ್ಯ ಹನುಮಂತಯ್ಯನವರು ಆ ಗಧೆಯನ್ನು ಹಿಡಿದು ಕೊಂಡು ಬರುವುದನ್ನು ನಿಲ್ಲಿಸಿದರು. ಇನ್ನೂ ಇಂತಹ ರಾಜಷಾಹಿ ಪ್ರವೃತ್ತಿಗಳನ್ನು ಬಿಡುವುದು ಎಷ್ಟೋ ಇವೆ.

ಶ್ರೀ ಡಿ. ದೇವರಾಜ ಅರಸ್.—ಮೀಸೆ ಬಿಡುವುದು ರಾಜಷಾಹಿಯ ಕುರುಹು ಅಲ್ಲವೆ ?

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲ, ಇವತ್ತು ಚೋಗ್ಯಾಲರನ್ನು ರಾಜಷಾಹಿ ಪೀಠದಿಂದ ಕೆಳಗೆ ಇಳಿಸಿದ್ದಾರೆ. ಅದೇ ರೀತಿಯಲ್ಲಿ ನಾವೂ ಕೂಡ ರಾಜಷಾಹಿಗೆ ಅನುಗುಣವಾಗಿ ಏನಾದರೂ ಇಟ್ಟುಕೊಂಡಿ ದ್ದರೆ ಅದನ್ನು ಬಿಟ್ಟು ಬಿಡಬೇಕೆಂದು ನಮ್ಮ ಮಾನ್ಯ ಗೆಳೆಯರಾದ ಶ್ರೀ ಕೃಷ್ಣನ್‌ರವರು ಹೇಳಿದರು. ಭಾರತವು ಅಂತರ ರಾಷ್ಟ್ರೀಯ ರಾಜಕಾರಣಕ್ಕೆ ಬಹಳ ಪ್ರಸಿದ್ಧವಾಗಿದೆ ಇವತ್ತು ಯಾವುದೇ ಸಾಮ್ರಾಜ್ಯ ಷಾಹಿ ಇರಲಿ ಇದನ್ನು ವಿರೋಧ ಮಾಡಲೇಬೇಕು. ಕಾಮನ್‌ವೆಲ್ತ್ ಇರತಕ್ಕದ್ದು ಸಾಮ್ರಾಜ್ಯ ಷಾಹಿ ಕೂಟದಲ್ಲಿ, ಅದನ್ನೂ ಕೂಡ ವಿರೋಧ ಮಾಡಬೇಕಾಗುತ್ತದೆ. ಹಿಂದೆ ಕರಿಯರಿಗೆ ಪ್ರವೇಶವಿಲ್ಲ ಎಂದು ಬೋರ್ಡ್ ಹಾಕಿದ್ದ ಹೋಟೆಲ್‌ಗಳು ಇದ್ದವು, ಒಮ್ಮೆ ಡಾ || ಲೋಹಿಯಾರವರು ಅಲ್ಲಿಗೆ ಹೋಗಿ ದ್ದಾಗ ಅವರು ಕಾನೂನು ಮೀರಿದರೆಂದು ದಸ್ತಗಿರಿ ಮಾಡಿದ್ದರು ಸಾಮ್ರಾಜ್ಯಷಾಹಿ ವ್ಯವಸ್ಥೆಯ ಬಗ್ಗೆ ವಿರೋಧವಿದೆ ಇದು ಕಾಮನ್‌ವೆಲ್‌ನಿಂದ ಹೊರಗಡೆ ಬರತಕ್ಕ ಪ್ರಶ್ನೆ ಆಗಬಹುದು, ಕರಿಯರ ಪ್ರಶ್ನೆ ಬಂದಾಗ ಅದು ಆಗಬಹುದು. ಶ್ರೀಮತಿ ಇಂದಿರಾಗಾಂಧಿಯವರು ಅಂತರರಾಷ್ಟ್ರೀಯ ರಾಜಕಾರಣದ ಬಗ್ಗೆ ಸ್ಪಷ್ಟ ನಿಲುವನ್ನು ತಾಳುವುದಾದರೆ ಅವರನ್ನು ಮೆಚ್ಚತಕ್ಕವರಲ್ಲಿ ನಾನೂ ಒಬ್ಬನಾಗುತ್ತೇನೆ. ಇವತ್ತು ಚೋಗ್ಯಾಲರನ್ನು ರಾಜ್ಯಷಾಹಿಯಿಂದ ಇಳಿಸತಕ್ಕ ಸಂದರ್ಭದಲ್ಲಿ ಎಷ್ಟು ಪ್ರಾಮಾಣಿಕತೆಯನ್ನು ತೋರಿಸಿದ್ದಾರೋ ಅದೇರೀತಿ ಎಲ್ಲಾ ರಾಜ್ಯಷಾಹಿ ವ್ಯವಹಾರದಲ್ಲೂ ಕೂಡ ಅವರ ಪ್ರಾಮಾಣಿಕತೆಯನ್ನು ತೋರಿಸಬೇಕು ಎನ್ನುವುದು ನಮ್ಮ ಒತ್ತಾಸೆ. ಆ ದೃಷ್ಟಿಯಿಂದ ಈ ರಾಜ್ಯಾಂಗ ತಿದ್ದುಪಡಿಯನ್ನು ಸಂಪೂರ್ಣವಾಗಿ ಸ್ವಾಗತ ಮಾಡಿ ಅದಕ್ಕೆ ಬೆಂಬಲ ನೀಡಿ ಈ ಎರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3-00 P.M.

† ಶ್ರೀ ಎಸ್. ಬಂಗಾರಪ್ಪ.—(ಸೊರಬ) ಮಾನ್ಯ ಅಧ್ಯಕ್ಷರೇ ಈಗಾಗಲೇ ಮೊಟ್ಟ ಮೊದಲನೆಯ ದಾಗಿ ಮಾತನಾಡಿದ ಶ್ರೀ ಟಿ.ಆರ್. ಶಾಮಣ್ಣನವರು ಕೂಡ ಕೆಲವು ವಿಷಯಗಳನ್ನು ಅನುಮಾನದ ರೂಪ ದಲ್ಲಿ ಸ್ಪಷ್ಟಪಡಿಸಿದ್ದಾರೆಯೇ ಹೊರತು ವಿರೋಧಮಾಡುವುದಕ್ಕೆ ಹೋಗಿಲ್ಲ ನನ್ನ ಅಭಿಪ್ರಾಯದಲ್ಲಿ ಈ ಒಂದು ವಿಷಯವನ್ನು ಸಂಪೂರ್ಣವಾಗಿ ನಾವು ನಮ್ಮ ಅನುಮೋದನೆಗೆ ಒಳಪಡಿಸಬೇಕು ಎನ್ನುವುದು ನಮ್ಮೆಲ್ಲರ ಭಾವನೆಯಾಗಿರಬೇಕು ಎಂದು ಭಾವಿಸುತ್ತೇನೆ. ಈಗಾಗಲೇ ಮಾತನಾಡಿರತಕ್ಕ ಮಾನ್ಯ ಸದ ಸ್ಯರು ತಮ್ಮ ಅಭಿಪ್ರಾಯವನ್ನು ಹೇಳಿದ್ದರಲ್ಲಿ ಬೇರೆ ಹೊಸದು ಏನು ಹೇಳಿದ್ದು ಕಾಣುತ್ತಾ ಇಲ್ಲ, ಈಗ

ಸಾಮ್ರಾಜ್ಯ ಶಾಹಿ ಅಥವಾ ರಾಜ್ಯ ಶಾಹಿ ಅಂತ್ಯವಾಗಿ ಪ್ರಜಾಪ್ರಭುತ್ವ ಉದಯವಾಗಿದೆ. ಅದಕ್ಕೆ ನಮ್ಮ ಸಂಪೂರ್ಣವಾದ ಬೆಂಬಲ ಕೊಡುತ್ತೇನೆ. ಇದು ಮೂಲ ಮಂತ್ರವಾಗಿರಬೇಕು. ಎಲ್ಲರೂ ಪ್ರಜಾ ಪ್ರಭುತ್ವವನ್ನು ಮನಸಾರೆ ಮೆಚ್ಚಿರತಕ್ಕ ನಾವು ಇಂತಹ ಒಂದು ಸನ್ನಿವೇಶಕ್ಕೆ ಒಡಂಬಡಲು ನಮ್ಮ ಮನೋಭೂಮಿಕೆ ಸಿದ್ಧವಾಗಿರಬೇಕು, ಎನ್ನುವುದನ್ನು ಉಲ್ಲೇಖ ಮಾಡುವುದಕ್ಕೆ ಸ್ಪಷ್ಟಪಡಿಸುವುದಕ್ಕೆ ಇಚ್ಛೆ ಪಡುತ್ತೇನೆ.

ಮಾನ್ಯ ಅಧ್ಯಕ್ಷರೆ ನನ್ನ ಅಭಿಪ್ರಾಯವಾದರೂ ಇಷ್ಟೇ. ಮಾನ್ಯ ಕೃಷ್ಣರವರು ಹೇಳಿದರು. ಅಂತರ್ ರಾಷ್ಟ್ರೀಯ ರಾಜಕೀಯ ವಿದ್ಯಮಾನಗಳಿಗೆ ಸಂಬಂಧಪಟ್ಟ ಹಾಗೆ ಪ್ರಪಂಚದ ಯಾವುದೇ ರಾಷ್ಟ್ರಗಳು ಇರಲಿ ಅವರವರ ಅನುಕೂಲಕ್ಕಾಗಿ ಅವರ ರಾಜಕೀಯ ಅಭಿಪ್ರಾಯಗಳನ್ನು ಆ ಒಂದು ರಾಷ್ಟ್ರಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಅವರು ರೂಢಿಸಿಕೊಳ್ಳುತ್ತಾರೆ. ಇದು ಸ್ಪಷ್ಟವಾಗಿ ವೇದ್ಯವಾಗಿದೆ. ಅದನ್ನು ಅವರು ಸ್ಪಷ್ಟವಾಗಿ ಹೇಳಿದರು. ಇಲ್ಲಿ ರಾಜ್ಯ ಶಾಹಿಯನ್ನು ಅಂತ್ಯಗೊಳಿಸತಕ್ಕ ಪ್ರಯತ್ನವನ್ನು ಇಲ್ಲಿಯ ಜನತೆ ಮಾಡಬೇಕಾದರೆ. ಅಖಂಡ ಭಾರತದ ಜನತೆ ಬೆಂಬಲ ಕೊಡತಕ್ಕಂಥ ಸಂದರ್ಭ ಏತಕ್ಕೆ ? ಚೈನಾದವರು ಸಿಕ್ಕಿಂನನ್ನು ನೀವು ಆಕ್ರಮಣ ಮಾಡಿಕೊಳುತ್ತಾ ಇದ್ದೀರಿ, ನಿಮ್ಮ ರಾಷ್ಟ್ರಕ್ಕೆ ಸೇರಿಸಿಕೊಳ್ಳುತ್ತಿದ್ದೀರಿ ಎನ್ನುವ ಅಪವಾದವನ್ನು ಕೂಡ ನಮ್ಮ ಮೇಲೆ ಮಾಡತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ನಾನು ಈಗ ನನ್ನ ಭಾಷಣದಲ್ಲಿ ಕಮ್ಯುನಿಸ್ಟ್ ಅವರ ಅಂತರ್‌ರಾಷ್ಟ್ರೀಯ ಸಿದ್ಧಾಂತದ ಬಗ್ಗೆ ಪ್ರಸ್ತಾಪಮಾಡುವುದಕ್ಕೆ ಇಚ್ಛೆ ಪಡುವುದಿಲ್ಲ, ವಿಷಯ ಚರ್ಚೆಗೆ ಬಂದದ್ದರಿಂದ ಹೇಳಬೇಕಾಗಿದೆ, ಪ್ರಪಂಚದ ಯಾವ ರಾಷ್ಟ್ರದಲ್ಲಿಯೇ ಇರಲಿ ಪ್ರಜಾಪ್ರಭುತ್ವವನ್ನು ನಾವು ಹುಟ್ಟು ಹಾಕುತ್ತೇವೆ, ಊರ್ಜಿತಗೊಳಿಸುತ್ತೇವೆ, ಅದರಂತೆ ಬದಲಾವಣೆ ಮಾಡುತ್ತೇವೆ ಎನ್ನುವ ಟಿಬೆಟ್‌ನ್ನು ಕಬಳಿಸಿರತಕ್ಕಂಥ ಚೈನಾಕ್ಕೆ ಏತಕ್ಕೆ ನಾವು ಬೆಂಬಲ ಕೊಡಬೇಕು? ಚೈನಾದವರು ಪ್ರಜಾಪ್ರಭುತ್ವಕ್ಕೆ ಹೊರತಾಗಿದ್ದಾರೆ. ಅವರು ಯಾವಾಗಲು ಅಂತರಾಷ್ಟ್ರೀಯ ರಾಜಕೀಯ ಸಮಸ್ಯೆಯ ಬಗ್ಗೆ ಅವರ ಒಂದು ಅಭಿಪ್ರಾಯವನ್ನು ಸ್ವಾರ್ಥ ರಾಜಕೀಯಕ್ಕಾಗಿ ರೂಪಿಸಿಕೊಳ್ಳುತ್ತಾರೆಂದು ಮಾನ್ಯ ಕೃಷ್ಣರವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾರೆ. ಅವರು ರಾಜಶಾಹಿಗೆ ವಿರುದ್ಧವಾಗಿದ್ದಾರೆ, ಅಂಥವರು ನೇಪಾಳ ದೇಶದ ದೊರೆಯ ಕಿರೀಟಧಾರಣಾ ಮಹೋತ್ಸವಕ್ಕೆ ಏತಕ್ಕೆ ಹೋಗಬೇಕಾಗಿತ್ತು ? ಕಪ್ಪಕಾಣಿಕೆಯನ್ನು ಏತಕ್ಕೆ ಸಲ್ಲಿಸಬೇಕಾಗಿತ್ತು ? ಟಿಬೆಟ್ ದೇಶವನ್ನು ಬಲವಂತವಾಗಿ ಏತಕ್ಕೆ ಕಬಳಿಸಬೇಕಾಗಿತ್ತು ? ಸಿಕ್ಕಿಂನಲ್ಲಿ ಜನಮತವನ್ನು ಸಂಗ್ರಹಿಸಿ ಅವರ ಅಭಿಪ್ರಾಯವನ್ನು ರೂಢಿಸಿ ಪ್ರಜಾಪ್ರಭುತ್ವದ ಅಭಿಪ್ರಾಯದ ಮೂಲಕ ಜನತೆಯ ಬೆಂಬಲವನ್ನು ತೆಗೆದುಕೊಂಡು ಭಾರತದೇಶದ ಒಕ್ಕೂಟಕ್ಕೆ ಸೇರಿಸಬೇಕು ಎನ್ನುವ ತೀರ್ಮಾನವನ್ನು ಅವರು ಮಾಡಿದ್ದಾರೆ. ಆದರೆ ಟಿಬೆಟ್‌ನಲ್ಲಿ ಜನಮತ ಸಂಗ್ರಹಮಾಡಿ ಟಿಬೆಟ್ ಚೈನಾಕ್ಕೆ ಹೋಗಬೇಕೇ ಅಥವಾ ಹಾಗೆಯೇ ಉಳಿಯಬೇಕೇ, ಅಥವಾ ನೆರೆ ರಾಜ್ಯವಾದ ಭಾರತಕ್ಕೆ ಸೇರಬೇಕೇ ಎನ್ನುವುದರ ಬಗ್ಗೆ ಚೈನಾದವರು ಯಾವ ಪ್ರಯತ್ನವನ್ನು ಮಾಡಲಿಲ್ಲ. ಕೆಲವು ರಾಷ್ಟ್ರಗಳು ಕಾಶ್ಮೀರದ ಬಗ್ಗೆ ಏನು ನಿಲುವನ್ನು ತಳೆದಿದ್ದಾರೆ ? ಅಂತರರಾಷ್ಟ್ರೀಯ ರಾಜಕೀಯ ಸಮಸ್ಯೆ ಏನು ಇರುತ್ತದೆ ಅದರಲ್ಲಿ ಸ್ವಾರ್ಥ ರಾಜಕೀಯ ದೃಷ್ಟಿಯನು ರೂಪಿಸಿಕೊಂಡು ಅದನ್ನು ಒಂದು ಬೃಹತ್ ಸಮಸ್ಯೆಯನ್ನಾಗಿ ಮಾಡುತ್ತಿವೆ. ಸಿಕ್ಕಿಮ್‌ನಲ್ಲಿ ಜನಮತ ಗಣನೆ ನಡೆದ ಮೇಲೆ ಪ್ರಜಾಪ್ರಭುತ್ವವನ್ನು ಒಪ್ಪಿರತಕ್ಕ ಜನಕ್ಕೆ ಬಹಳ ದೊಡ್ಡ ಬೆಂಬಲ ಸಿಕ್ಕಿದೆ. ಇದು ಬಹಳ ಸಂತೋಷದ ಸಂಗತಿ. ಆದರೆ ಒಂದು ಮಾತನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಹೇಳುತ್ತೇನೆ. ಈವತ್ತು ನಮ್ಮ ಭಾರತ ದೇಶದ ಒಕ್ಕೂಟದಲ್ಲಿ ಅನೇಕ ರಾಜ್ಯಗಳು ಇವೆ. ಸಿಕ್ಕಿಮ್ ಮತ್ತೊಂದು ರಾಜ್ಯ ನಮಗೆ ಸೇರುವುದು ಬಹಳ ಸಂತೋಷವಾಗಿದೆ ಪ್ರಜಾಪ್ರಭುತ್ವ ವಾದವನ್ನು ಒಪ್ಪಿರತಕ್ಕ ನಮ್ಮ ಭಾರತ ದೇಶಕ್ಕೆ ಸಿಕ್ಕಿಮ್ ಸೇರುತ್ತಿರುವುದಕ್ಕೆ ನೆರೆ ರಾಷ್ಟ್ರಗಳು ಬೆಂಬಲ ಸೂಚಿಸುತ್ತಿರುವುದಕ್ಕೆ ಬಹಳ ಸಂತೋಷವಾಗುತ್ತದೆ. ಆದರೆ ದೇಶದಲ್ಲಿರತಕ್ಕ ಹಲವಾರು ತೊಂದರೆಗಳ ಜೊತೆಗೆ, ಈ ಒಂದು ಗೋಳನ್ನು ಕಟ್ಟಿಕೊಂಡು ಬೇಸತ್ತೆವು ಎನ್ನುವ ಭಾವನೆ ಅವರಿಗೆ ಕೊಡಬಾರದು. ಇಲ್ಲಿಯೇ ಹಲವಾರು ಸಮಸ್ಯೆಗಳನ್ನು ತಲೆಯಲ್ಲಿ ತುಂಬಿಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ವಿಷಯವನ್ನು ತಿಳಿದುಕೊಂಡಿರಬಹುದು. ಅವರು ತಮ್ಮ ಮಿತ್ರರಿಗೆ ಹೇಳಬಹುದು, ಅಲ್ಲಿಯ ಸೌಂದರ್ಯವನ್ನು ವರ್ಣಿಸುತ್ತಾ ಅಲ್ಲಿ ಸೂರ್ಯ ಹುಟ್ಟಿ ಸುಮಾರು ನೆತ್ತಿ ಹತ್ತಿರ ಬಂದಾಗ ಕಾಣುತ್ತದೆ, ಬಹಳ ಸುಂದರವಾದ ನದಿ, ವನಗಳನ್ನು ಕೂಡಿದ ಪ್ರದೇಶವಾಗಿದೆ ಎಂದು ವರ್ಣಿಸುತ್ತಾ, ರಾಜಕೀಯದಲ್ಲಿ ಬೇಸತ್ತು, ಸುಸ್ತು ಹೊಡೆದಾಗ, ಸಿಕ್ಕಿಮ್ ರಾಜ್ಯ ಬಹಳ ಚೆನ್ನಾಗಿದೆ ಎಂದು ಅದನ್ನು ಹೆಲ್ತ್ ರಿಸಾರ್ಟ್ ಮಾಡಿಕೊಂಡರೆ ಗತಿ ಏನು ಎನ್ನುವುದು ನಮ್ಮ ಯೋಚನೆಯಾಗಿದೆ ಹೆಲ್ತ್ ರಿಸಾರ್ಟ್ ಮಾಡಿಕೊಳ್ಳುವುದು ಬಹಳ ಸಂತೋಷ ಆದರೆ ಅದು ಬಹಳ ಸುಂದರವಾದ ರಾಜ್ಯವಾದುದರಿಂದ ಅದನ್ನು ಸೌಂದರ್ಯವಾಗಿಯೇ ಉಳಿಸಬೇಕೆಂದು ಹೇಳುತ್ತೇನೆ. ಅಲ್ಲಿ ಹೆಚ್ಚಿಗೆ ಫಾರೆಸ್ಟ್ ಇದೆ. ಮಾನ್ಯ ಸಿ. ಎನ್. ಪಾಟೀಲರಿಗೆ ಈ ಸಂದರ್ಭದಲ್ಲಿ ನೆನಪು ಮಾಡಿಕೊಟ್ಟರೆ ಒಳ್ಳೆಯದು ಎಂದು ಭಾವಿಸುತ್ತೇನೆ ಪ್ಲಾಂಟೇಷನ್ ಮಾಡುತ್ತೇವೆಂದು ಹೇಳಿ ಮರಗಳನ್ನು ಕಡಿದು ತಲೆಯನ್ನು ನುಣ್ಣಗೆ ಬೋಳಿಸಿದ ಹಾಗೆ ಮಾಡುವುದು ಬೇಡ,

ಸಿಕ್ಕಿಮ್ ಸೌಂದರ್ಯವಾದ ಕೇಂದ್ರ, ಅದನ್ನು ಹೆಲ್ತ್ ರಿಸಾರ್ಟ್ ಮಾಡುವ ವಿಷಯದ ಬಗ್ಗೆ ಅವರ ಹೆಚ್ಚಿನ ಗಮನ ಬೇಡ. ಅಲ್ಲಿಯ ಜನಜೀವನದ ಮಟ್ಟವನ್ನು ಏರಿಸುವುದಕ್ಕೆ ವ್ಯವಸಾಯವೇ ಮುಖ್ಯ ಕಸುಬಾಗಿರುವುದರಿಂದ ಅಲ್ಲಿ ಭೂ ಸುಧಾರಣೆಯನ್ನು ಅತಿ ಶೀಘ್ರವಾಗಿ ಜಾರಿಗೆ ತರಬೇಕು. ಕರ್ನಾಟಕ ರಾಜ್ಯದ ಭೂ ಸುಧಾರಣೆ ಕಾನೂನನ್ನು ಅಲ್ಲಿ ತರುವುದಿದ್ದರೆ ತಪ್ಪು ಎಂದು ಹೇಳಬಹುದು ಅದನ್ನು ಒಪ್ಪಿಕೊಳ್ಳೋಣ. ಈವತ್ತು ಬಹಳ ಸಂತೋಷದ ದಿನವಾಗಿದೆ ಮಾನ್ಯ ಕೃಷ್ಣರವರು ಹೇಳಿದಹಾಗೆ ಈ ಸದನಕ್ಕೆ ಈ ವಿಷಯ ಮತ್ತೊಂದು ರೂಪದಲ್ಲಿ ಇಂದು ಬಂದಿದೆ. ಆ ದೃಷ್ಟಿಯಿಂದ ಈ ಒಂದು ವಿಷಯವನ್ನು ಹೃತ್ಪೂರ್ವಕವಾಗಿ ಸ್ವಾಗತಮಾಡುತ್ತೇನೆ ಎನ್ನತಕ್ಕ ಮಾತನ್ನು ಹೇಳಿ ಇಷ್ಟು ಮಾತುಗಳನ್ನು ಆಡಲು ಅವಕಾಶ ಕೊಟ್ಟಿದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

SRI B. B. SAYANAK (Belgaum).—Madam Speaker, I welcome this 38th Amendment of the Constitution. The Central Government has respected the wishes of the people of the Sikkim and they have created this 22nd State in India. Sikkim is the 22nd full-fledged State of India. This is an historic and auspicious occasion. Sikkim was never an independent State. When Mr. Chou enlai had visited New-Delhi in April 1960, he had said that China had recognised India's special relationship with Sikkim. In the year 1947, the people of Sikkim had submitted a Memorandum to the Chogyal demanding that Sikkim should be merged with the Indian territory. But the Government of India has not given any consent to that Memorandum. Recently, we have given the concurrence to a Bill-the Constitution Amendment Bill making Sikkim as associate State-and now we are ratifying the Amendment Bill declaring Sikkim as one of the States of India. In this Bill, Chogyal's office has been abolished. And even the office of the Executive Chief has also been abolished. But according to me the Governor has given special powers—I don't know why? I want to ask the concerned Minister why this special powers given to the Sikkim Governor and there is also an emergency Article. When this emergency powers are given, I am afraid that there will be President's rule in Sikkim Mr. Chogyal has tried his level best to internationalise this issue. He has sent his brother to United Nations Organisation to mobilise the world opinion. He had sent his American wife to America to try her best to make anti-Indian propaganda in America. His son who was in United Kingdom has also tried his level best to criticize the Indian politics. So, the Government has taken this drastic action agaist Chogyal. The Assembly has passed unanimous resolution on 10th April and then there was a referendum on 14th. I don't know why such a haste Only within four days there was a referendum. Whether China is going to attack India or not—I don't know. But, there should not be any haste. Apart from all these things, our Parliament has did a good thing that they have created this 22nd State in India. With these few words, I thank the Chair and conclude my speech.

† ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್ (ಹೊಸನಗರ).— ಸನ್ಮಾನ್ಯ ಅಧ್ಯಕ್ಷರೆ, ಸಿಕ್ಕಿಂ ರಾಜ್ಯವನ್ನು ನಮ್ಮ ದೇಶದಲ್ಲಿ ಇಪ್ಪತ್ತೆರಡನೆಯ ಸ್ಥಾನದ ಸಂಸ್ಥಾನವನ್ನಾಗಿ ಸೇರಿಸಿಕೊಂಡಿರತಕ್ಕ ಚರಿತ್ರಾರ್ಹವಾದ ನಿರ್ಣಯವನ್ನು ನಾವು ಸ್ವಾಗತಿಸಬೇಕು. ಅದನ್ನು ಬಿಟ್ಟು ನಮ್ಮ ಗೆಳೆಯರಾದ ಶ್ರೀಮಾನ್ ಶಾಮಣ್ಣನವರು ಅದರ ಬಗ್ಗೆ ಒಡಕು ಸ್ವರದಲ್ಲಿ ಮಾತನಾಡಿದರು. ಇದರಿಂದ ನಮಗೆ ತುಂಬಾ ಖೇದವಾಗುತ್ತದೆ. ಅಲ್ಲದೇ ಇಂತಹ ಒಂದು ಚರಿತ್ರಾರ್ಹವಾದ ಒಂದು ನಿರ್ಣಯವನ್ನು

ಸಭೆಯಲ್ಲಿ ತಂದಾಗಲೂ ಕೂಡ ನಾವು ಅದಕ್ಕೆ ಪುರಸ್ಕಾರ ಕೊಡುವುದನ್ನು ಬಿಟ್ಟು ಅದರಲ್ಲಿ ತಪ್ಪುಗಳನ್ನು ಕಂಡುಹಿಡಿಯುವುದಕ್ಕೆ ಹೋದರೆ ನಾವು ಅದನ್ನು ವಿರೋಧಿಸಬೇಕಾಗುತ್ತದೆ. ಈ ಸಿಕ್ಕಿಂ ಅನ್ನು ಅಸೋಸಿಯೇಟ್ ಸ್ಟೇಟ್ ಆಗಿ ಮಾಡತಕ್ಕ ಒಂದು ಬಿಲ್ಲು ಬಂದಾಗ ಪಾರ್ಲಿಯಮೆಂಟಿನಲ್ಲಿ ಕೆಲವಾರು ಜನರು ಅದನ್ನು ವಿರೋಧ ಮಾಡಿದರು, ಅದು ನನಗೆ ನೆನಪಿಗೆ ಬರುತ್ತದೆ, ಈ ದೇಶದ ಹಣೆಬರಹ ಹೇಳಿವುದಾದರೆ ಅಲ್ಲಿ ಆಕಳಿಸುವ ಜನ ಇದ್ದರೆ, ಇಲ್ಲಿ ಆಕಳಿಸುವ ಜನ ಇದ್ದಾರೆ, ಅಮೇರಿಕಾದಲ್ಲಿ ಕೆಮ್ಮುವ ಜನ ಇದ್ದರೆ ಇಲ್ಲಿ ಕೆಮ್ಮುವ ಜನ ಇದ್ದಾರೆ. ಇವತ್ತಿನ ದಿವಸ ತಮ್ಮ ತಲೆಯನ್ನು ಬಾಡಿಗೆಗೆ ಕೊಟ್ಟು ಇನ್ನೊಬ್ಬರ ಅಭಿಪ್ರಾಯವನ್ನು ಹೇಳತಕ್ಕ ಜನರು ಎಲ್ಲಿಯವರೆಗೆ ಇರುತ್ತಾರೋ ಅಲ್ಲಿಯುವರೆಗೂ ನಾವು ಒಳ್ಳೆಯದನ್ನು ಒಳ್ಳೆಯದು ಎಂದು ಹೇಳತಕ್ಕದ್ದು ಒಂದು ಸಂಸ್ಕೃತಿಗೆ ಸರಿಯಾಗಿ ಕಂಡುಬರುವುದಿಲ್ಲ. ಇವೊತ್ತು ಮಾನ್ಯ ಶಾಮಣ್ಣನವರಿಗೆ ಮರೆತು ಹೋಗಿದೆ. ಈ ಸಿಕ್ಕಿಂ ರಾಜ್ಯವು ಭಾರತ ದೇಶಕ್ಕೆ ಅನೂಚಾನವಾಗಿ ಹೊಂದಿಕೊಂಡು ಬಂದಿದೆಯೇ ಹೊರತು ಬೇರೆ ಇಲ್ಲ ಎಂದು ಹೇಳುತ್ತೇನೆ. ಹಿಂದೆ ಚೇಂಬರ್ ಆಫ್ ಪ್ರಿನ್ಸಸ್ ಎಂದು ಇದ್ದ ಕಾಲದಲ್ಲೇ ಸಿಕ್ಕಿಂ ದೊರೆಯು ಅದರ ಸದಸ್ಯರಾಗಿದ್ದರು. ಯಾವುದೋ ಒಂದು ದೆಸೆಯಿಂದ, ಯಾವುದೋ ಒಂದು ಕಾರಣದಿಂದ ೧೯೪೭ ರಲ್ಲಿ ಸ್ವತಂತ್ರ ಬಂದಾಗ ಎಲ್ಲಾ ಸಂಸ್ಥೆಗಳು ಭಾರತ ದೇಶಕ್ಕೆ ವಿಲೀನವಾದಂತೆ ಇದು ಕೂಡ ಆಗಬೇಕಾಗಿತ್ತು ಅದು ತಪ್ಪಿ ಹೋಯಿತು. ಆಗ ಅದು ತಪ್ಪಿಹೋಗಿದ್ದು ಈಗ ಅದು ಸರಿಯಾದ ರೀತಿಯಲ್ಲಿ ಹೋದರೂ ಕೂಡ ಅದನ್ನು ಟೀಕೆ ಮಾಡುವ ಜನರು ಇದ್ದಾರೆ ಎಂದರೆ ಇದಕ್ಕೆ ಏನು ಹೇಳಬೇಕೋ ಅರ್ಥವಾಗುವುದಿಲ್ಲ. ಈಗ ತೊಡಕು ಮಾತು ಹೇಳುವುದನ್ನು ವಿರೋಧ ಮಾಡಬೇಕಾಗುತ್ತದೆ. ಈಗ ಸಿಕ್ಕಿಂ ರಾಜ್ಯವು ನಮ್ಮ ದೇಶಕ್ಕೆ ಇಪ್ಪತ್ತೆರಡನೇ ರಾಜ್ಯವಾಗಿ ಬಂದಿರತಕ್ಕದ್ದು, ಇದರ ಆರ್ಥಿಕ ವ್ಯವಸ್ಥೆ ನಮ್ಮ ಕೈಯ್ಯಲ್ಲೇ ಇರುತ್ತದೆ ಅಲ್ಲದೇ ಈ ಸಿಕ್ಕಿಂ ರಾಜ್ಯವನ್ನು ನಮ್ಮದೇ ಆದಂಥ ಒಂದು ಸಂಸ್ಥೆ ಎಂದು ಹೇಳಿ ಅಳವಡಿಸಿಕೊಂಡಿರುವುದನ್ನು ನಮ್ಮ ಮಾನ್ಯ ಮಿತ್ರರು ಅರಿತುಕೊಳ್ಳಬೇಕು. ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಜಿಯವರನ್ನು ಇದರ ಬಗ್ಗೆ ಕೈಗೊಂಡ ಕ್ರಮಕ್ಕಾಗಿ ವಂದಿಸಬೇಕಾದ್ದು ನಮ್ಮ ಕರ್ತವ್ಯ ಎಂದು ತಿಳಿದುಕೊಂಡಿದ್ದೇನೆ. ಈ ಒಂದು ವಿಷಯವನ್ನು ಚರಿತ್ರೆಯಲ್ಲಿ ಬರೆದಿಡತಕ್ಕದ್ದನ್ನು ಯಾರೂ ಕೂಡ ಅಲ್ಲಗಳೆಯುವ ಹಾಗೆ ಇಲ್ಲ ಎಂದು ಹೇಳುತ್ತೇನೆ. ಇವೊತ್ತು ವಿದೇಶಾಂಗ ನೀತಿಯಲ್ಲಿ ತಡವಾದರೂ ಧೈರ್ಯದಿಂದ ಮುನ್ನುಗ್ಗಿರುವುದನ್ನು ಶ್ಲಾಘನೆ ಮಾಡುವುದು ಬಿಟ್ಟು, ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲುಸಿಕ್ಕಿದಂತೆ ಎಂದು ಹೇಳಿದ ಹಾಗೆ ಹೇಳಿದರೆ ಇನ್ನು ಯಾರು ತಾನೇ ಈ ದೇಶವನ್ನು ರಕ್ಷಣೆ ಮಾಡುತ್ತಾರೆ? ಅದು ಪರಮಾತ್ಮನಿಗೆ ಗೊತ್ತು. ಅಲ್ಲದೆ ಪ್ರತಿಯೊಂದು ಹಂತದಲ್ಲೂ ಕೂಡ ನಮ್ಮ ವಿದೇಶಾಂಗ ನೀತಿಯನ್ನು ಎಷ್ಟು ಉಪಾಯವಾಗಿ ಅದನ್ನು ಸುಲಲಿತವಾಗಿ, ಸಲೀಸಾಗಿ ಬಿಡಿಸಿದ್ದಾರೆ ಎಂದು ಯೋಚನೆ ಮಾಡುವುದಾದರೆ ನಿಜವಾಗಿಯೂ ಕೂಡ ಶ್ಲಾಘಿಸಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇವತ್ತು ಮಾನ್ಯ ಶಾಮಣ್ಣನವರು ಕಾಶ್ಮೀರದಲ್ಲಿನ ಶ್ರೀಮಾನ್ ಶೇಕ್ ಅಬ್ದುಲ್ಲಾ ಅವರ ಬಗ್ಗೆ ಮಾತನಾಡಿದರು, ಇವೊತ್ತಿನ ದಿವಸ ಅಲ್ಲಿ ಇದ್ದಂಥ ಒಂದು ತಲೆನೋವನ್ನು ಸಲೀಸಾಗಿ ಹತ್ತಿಯನ್ನು ಬಿಡಿಸಿದಂತೆ ಬಿಡಿಸಿದ್ದಾರೆ, ಅದರ ಬಗ್ಗೆ ಒಂದು ಒಳ್ಳೆಯ ಮಾತನ್ನು ಆಡುವುದು ಬೇಡವೇ ಎಂದು ಕೇಳುತ್ತೇನೆ.

ಅಜಾದ್ ಕಾಶ್ಮೀರ ಪಾಕಿಸ್ತಾನದ ಕೈಯೊಳಗೆ ಇದೆ, ಶ್ರೀಮಾನ್ ಶೇಖ್ ಅಬ್ದುಲ್ಲಾ ಬಗ್ಗೆ ಹೆಚ್ಚಿನ ಗೌರವ ಮತ್ತು ಮಾನ್ಯತೆ ಇಟ್ಟುಕೊಂಡಿರತಕ್ಕ ಜನ ಅಲ್ಲಿ ಇದ್ದಾರೆಂದು ಹೇಳುವುದಕ್ಕೆ ಬಯಸುತ್ತೇನೆ. ನಾಯಕತ್ವದ ಪ್ರಶ್ನೆ ಬಂದಾಗ, ಅಜಾದ್ ಕಾಶ್ಮೀರದ ಜನತೆ ಶೇಖ್ ಅಬ್ದುಲ್ಲಾರವರ ಬಗ್ಗೆ ತುಂಬಾ ಗೌರವ ಇಟ್ಟುಕೊಂಡಿದ್ದಾರೆ, ಆ ಗೌರವವನ್ನು ಉಳಿಸಿಕೊಳ್ಳುತ್ತಾರೆಂದು ಈ ಸಂಧರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ ಬಾಂಗ್ಲಾದೇಶದ ಬಗ್ಗೆಯೂ ಶ್ರೀಮಾನ್ ಶಾಮಣ್ಣನವರು ಟೀಕೆ ಮಾಡಿದರು. ನನಗೆ ಇವತ್ತು ಬಹಳ ನೋವಾಗುತ್ತಿದೆ ಇವತ್ತು ನಾವು ದಿನಬೆಳಗಾದರೆ ಪಾಕಿಸ್ಥಾನದಿಂದ ಆಗುತ್ತಿದ್ದ ತಲೆನೋವು ತಪ್ಪಿಸಿದ್ದೇವೆ, ಅದನ್ನು ಟೀಕೆ ಮಾಡಿದರೆ, ನಿಜವಾಗಿಯೂ ದೇವರು ಮೆಚ್ಚಲಾರ ಎಂದು ಹೇಳುವುದಕ್ಕೆ ಬಯಸುತ್ತೇನೆ. ಗೌರ್ನರ್‌ರವರಿಗೆ ಸ್ಪೆಷಲ್ ಸ್ಟೇಟಸ್ ಕೊಟ್ಟಿರಬಹುದು, ಏತಕ್ಕೆ ಕೊಟ್ಟಿದ್ದಾರೆಂಬುದನ್ನು ಕೆಲವು ಸಂದರ್ಭದಲ್ಲಿ ಗೌರ್ನರ್‌ರವರಿಗೆ ವಿಶೇಷವಾದ ಅಧಿಕಾರ ಇರಬೇಕು ಎನ್ನುವ ದೃಷ್ಟಿಯಿಂದ ಸ್ಪೆಷಲ್ ಸ್ಟೇಟಸ್ ಕೊಟ್ಟಿದ್ದಾರೆ ಎಂದು ಸದನದ ಮುಂದೆ ಹೇಳಿ, ಚರಿತ್ರಾರ್ಹವಾದ ನಿರ್ಣಯವನ್ನು ಸ್ವಾಗತಮಾಡಿ, ಅವಕಾಶಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ). – ಮಾನ್ಯ ಅಧ್ಯಕ್ಷರೇ, ಸಂವಿಧಾನದ ೩೮ನೇ ತಿದ್ದುಪಡಿಗೆ ಸ್ವಾಗತಬಯಸುತ್ತಾ, ಎರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ನಮ್ಮ ಮಾನ್ಯ ಮಿತ್ರರುಗಳು ಇದರಬಗ್ಗೆ ಈಗಾಗಲೇ ಸಾಕಷ್ಟು ಹೇಳಿದ್ದಾರೆ. ಸಿಕ್ಕಿಂ ಎನ್ನುವುದು ಬಹುಶಃ ಹೊಸ ತಲೆಮಾರಿನ ಪೀಳಿಗೆಗೆ, ಹೊಸ ಹೆಸರಿನಂತೆ ಕಂಡುಬರುತ್ತದೆ. ಕಾರಣ, ಇದುವರೆಗೆ ಇದರ ಬಗೆ

ಹೆಚ್ಚಿನ ಪ್ರಚಾರವಾಗಲೀ, ಇದರ ವಿಚಾರವಾಗಲೀ ಗೊತ್ತಿರಲಿಲ್ಲ. ಈಗ ಅದು ಭಾರತದಲ್ಲಿಯೇ ಅಲ್ಲದೇ ಜಗತ್ತಿನ ಎಲ್ಲಾ ಕಡೆಗಳಲ್ಲಿಯೂ ಗಣ್ಯತೆ ಪಡೆದಿರುವ ಪ್ರದೇಶವಾಗಿ ನಿಂತಿದೆ. ಈ ರಾಜ್ಯದ ಜನ ಸಂಖ್ಯೆ ಸುಮಾರು ಎರಡು ಲಕ್ಷ. ಯಾವ ಕಾರಣಕ್ಕಾಗಿ ಗಣ್ಯತೆ ಕೊಟ್ಟಿದ್ದಾರೆ, ಭಾರತದ ಪ್ರಸ್ತಭೂಮಿ ಯೊಳಗೆ ಇರತಕ್ಕ ಮಾರ್ಗ, ನೇರವಾದ ಹತ್ತಿರವಾದ ಮಾರ್ಗ ಸಿಕ್ಕಿಂ ಮಾತ್ರ. ಆ ದೃಷ್ಟಿಯಿಂದ ಮುಂದಿನ ಅಪಾಯವನ್ನು ಮುಂದಾಲೋಚನೆಯಿಂದ ಊಹಿಸಿ, ಬರಬಹುದಾದ ಅಪಾಯವನ್ನು ತಪ್ಪಿಸುವ ಉದ್ದೇಶದಿಂದ, ಸಿಕ್ಕಿಂ ರಾಜ್ಯದ ಜನತೆಗೆ ಸಂಪೂರ್ಣವಾದ ಸ್ವಾತಂತ್ರ್ಯವನು ಕೊಟ್ಟು, ಭಾರತದ ಸಂವಿಧಾನದ ಅಡಿಯಲ್ಲಿ ಬದಕುವ ಅವಕಾಶವನ್ನು ಕಲ್ಪಿಸಿದ್ದಾರೆ. ಹಿಂದೆಯೇ ಸಿಕ್ಕಿಂ, ಭೂತಾನ, ನೇಪಾಳ ಹಾಗೂ ಟಿಬೆಟ್‌ಗಳಿಗೆ ಒಂದು ಸ್ವತಂತ್ರವಾದ ಅಸ್ತಿತ್ವವನ್ನು ಇಟ್ಟಿದ್ದರು. ಕಾರಣ ಏನು ಎಂದರೆ, ಚೈನಾ ಮತ್ತು ರಷ್ಯಾ ಇಂಥ ಬೃಹತ್ ರಾಷ್ಟ್ರಗಳು ಏನು ಇದ್ದಾವೆ, ಇವು ನಾಳೆ ಬಸ್ಮಾಸುರ ರಾಕ್ಷಸರಂತೆ ಇತ್ತೀಚೆಗೆ, ಭಾರತದ ಭೂಮಿಯ ಮೇಲೆ ಆಕ್ರಮಣ ನಡೆಸಿದ್ದರು, ಇದನ್ನು ಬ್ರಿಟೀಷರು ತೋರಿಸಿದರು, ಆ ಕಾಲದಿಂದ ಆ ಭಾಗಗಳನ್ನು ಹಾಗೆಯೇ ಬಿಟ್ಟಿದ್ದರು. ಆದರೆ, ಇತ್ತೀಚೆಗೆ ಚೈನಾದವರು ಟಿಬೇಟ್ ಪ್ರದೇಶವನ್ನು ಕಬಳಿಸಿದರು, ಆ ಸಂದರ್ಭದಲ್ಲಿ ನಮ್ಮ ರಾಷ್ಟ್ರದ ಪ್ರಧಾನಮಂತ್ರಿಗಳಾದ ಪಂಡಿತ್ ಜವಹರಲಾಲ್ ನೆಹರೂರವರು, ಈ ಬಗ್ಗೆ ಟಿಬೇಟ್‌ನ್ನು ಬಿಡಿಸಿ ಕೊಳ್ಳುವು ದಕ್ಕೆ ಪ್ರಯತ್ನ ಮಾಡಬೇಕೆಂದು, ನಾವು ಸಮತಾ ವಾದಿಗಳು ಡಾಕ್ಟರ್ ಲೋಹಿಯಾರವರು ಒತ್ತಾಯ ಪೂರ್ವಕವಾಗಿ ಹೇಳಿದಾಗ, ಜವಹರಲಾಲ ನೆಹರೂರವರು ಹೇಳಿದರು ಅಲ್ಲಿ ಒಂದು ಹುಲ್ಲುಕಡ್ಡಿಯೂ ಬೆಳೆಯುವುದಿಲ್ಲ, ಅದರ ಬಗ್ಗೆ ಏಕೆ ತಲೆಕೆಡಿಸಿಕೊಳ್ಳಬೇಕು ಎಂದು ಬುದ್ಧಿವಾದ ಹೇಳಿದರು. ಭಾರತದ ರಕ್ಷಣೆಗಿದ್ದ ಬಹು ಪ್ರದೇಶವನ್ನು ಚೈನಾದವರ ಕೈಗೆ ಕೊಟ್ಟರು. ಇದರ ಬಗ್ಗೆ ಬೆಂಬಲ ಮತ್ತು ವಿರೋಧ ಹೇಳುವುದಕ್ಕೆ ಇಷ್ಟಪಡುವುದಿಲ್ಲ ಅಂತರರಾಷ್ಟ್ರೀಯ ವಿದ್ಯಾಮಾನಗಳು ಬೆಳೆದಂತೇ ಜಗತ್ತಿನ ಮಹಾ ರಾಷ್ಟ್ರಗಳು ಚೈನಾದವರ ಪರ ವಹಿಸಿದ್ದನ್ನು ಸಮರ್ಥಿಸಬೇಕಾಗಿದೆ. ಇವತ್ತು ನಮ್ಮ ನೇಫಾ ಪ್ರದೇಶ ಏನು ಇದೆ. ಈ ಪ್ರದೇಶವನ್ನು ಸ್ವತಂತ್ರಗೊಳಿಸಿ. ಅವರು ಸಂಪೂರ್ಣವಾಗಿ ಜನತಂತ್ರದ ತತ್ವದ ಬದುಕಿ ನಲ್ಲಿ ತಮ್ಮ ಜೀವನವನ್ನು ಅಳವಡಿಸಿಕೊಂಡು ಬಾಳುವಂತೆ ಪ್ರಯತ್ನ ಮಾಡಬೇಕು ನೈರುತ್ಯ ನೇಫಾಕ್ಕೆ ಊರ್ವಸಿ ಎಂಬ ಹೊಸ ಹೆಸರನ್ನು ಕೊಟ್ಟು, ಅಸ್ತಿತ್ವಕ್ಕೆ ತರಬೇಕು ಎಂದು ಮಾಡಿದ್ದೆವು, ಆ ಹೆಸರನ್ನು ಕೊಡದೆ ಏನೋ ಒಂದು ರೂಪದಲ್ಲಿ ತಂದಿದ್ದಾರೆ, ಇದೇ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ, ಅಲ್ಲಿ ಇದ್ದಂತ ಸಾಮ್ರಾಜ್ಯಷಾಹಿ ಹೋಗಿ, ನಮ್ಮ ರಾಷ್ಟ್ರದ ಒಂದು ರಾಜ್ಯವಾಗಿದೆ. ಇದರ ವಿಚಾರದಲ್ಲಿ ಜನ ತಾವಾಗಿಯೇ ಪ್ರಜಾಪ್ರಭುತ್ವವನ್ನು ಅಪೇಕ್ಷೆಪಟ್ಟಿದ್ದಾರೆ. ಆದರೆ, ಅಲ್ಲಿ ಒಂದು ವ್ಯವಸ್ಥೆಯನ್ನು ನಿರ್ಮಾಣಮಾಡಬೇಕು ಅದನ್ನು ಬಿಟ್ಟು ನೀವು ಸ್ವತಂತ್ರವಾಗಿ ಸಂಪೂರ್ಣವಾದ ಪ್ರಜಾಪ್ರಭುತ್ವದ ತಳಹದಿಯಮೇಲೆ ಬದುಕಿ ಎಂದರೆ, ಹಂಗೇರಿ ಜನ ಎದ್ದಾಗ, ಹಂಗೇರಿ ಜನರ ಶಕ್ತಿಯನ್ನು ದಮನಮಾಡ ತಕ್ಕದ್ದನ್ನು ಆ ಸಮಯದಲ್ಲಿ ನಾವು ಒಕ್ಕರಲಿನಿಂದ ಹೇಳಬೇಕಾಗಿದೆ. ಹಾಗೆಯೇ ಜಗತ್ತಿನ ಮಹಾರಾಷ್ಟ್ರ ಗಳಾದ ಅಮೇರಿಕಾವಾಗಲೀ, ರಷ್ಯವಾಗಲೀ ಚೈನಾವಾಗಲೀ ಸಣ್ಣಪುಟ್ಟ ರಾಷ್ಟ್ರಗಳ ಮೇಲೆ ಆಕ್ರಮಣ ಮಾಡಿದಾಗ ಪ್ರತಿಭಟಿಸತಕ್ಕ ಶಕ್ತಿ ಭಾರತದ ವಿದೇಶಾಂಗ ನೀತಿಯಲ್ಲಿದೆಯೇ ಎಂದು ಪ್ರಶ್ನೆ ಹಾಕುತ್ತಿ ದೇನೆ. ಇವತ್ತು ನಮ್ಮ ಸ್ನೇಹಿತರು, ಶೀರ್ನಾಳಿ ಚಂದ್ರಶೇಖರ್‌ರವರು ಬಾಡಿಗೆ ವಿಷಯ ಹೇಳಿದರು. ಇದು ನಮ್ಮ ರಾಷ್ಟ್ರದಲ್ಲಿ, ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಒಳ್ಳೆಯ ಜನ. ಒಳ್ಳೆಯ ವ್ಯವಸ್ಥೆಗಳು ಬಾಡಿಗೆಗೆ ಮೀಸಲಾಗಿದಾವೆ. ನಮ್ಮಲ್ಲಿ ಬಾಡಿಗೆ ತಲೆಗಳು ಇವೆ, ಆದರೆ ನಮ್ಮ ರಾಷ್ಟ್ರದ ವಿದೇಶಾಂಗ ನೀತಿ ಮಾತ್ರ ಬಾಡಿಗೆ ಆಗಬಾರದು. ನಮ್ಮ ರಾಷ್ಟ್ರದ ವಿದೇಶಾಂಗ ನೀತಿ ಸ್ವತಂತ್ರವಾದ ಅಸ್ತಿತ್ವದಲ್ಲಿ ಇರಬೇಕು. ಯಾವುದೇ ಕಾರಣದಿಂದ ರಷ್ಯದ ಕಡೆಯಲ್ಲಾಗಲೀ, ಅಮೇರಿಕಾದ ಕಡೆಯಲ್ಲಾಗಲೀ, ಚೈನಾ ದವರ ಕಡೆಯಲ್ಲಾಗಲೀ ಹೋಗಬಾರದು ನಾವು ಒಂದು "ಥರ್ಡ ಫೋರ್ಸ್" ಹೊಸ ವಿದೇಶಾಂಗ ನೀತಿಯನ್ನು, ಅಂತರಾಷ್ಟ್ರೀಯ ಶಕ್ತಿಯನ್ನು ರೂಪಿಸಬೇಕು. ಆಗ ಅತ್ತ ಚೈನಾದಕಡೆ, ಇತ್ತ ರಷ್ಯಾ ಮತ್ತು ಅಮೇರಿಕಾಗಳ ಈ ಶಕ್ತಿ ಬಣಗಳ ತಿಕ್ಕಾಟದಲ್ಲಿ, ಎರಡೂ ಕಡೆಗೂ ಅನ್ಯಾಯಗಳಾಗುತ್ತವೆ ಅವು ಗಳನ್ನು ಪ್ರತಿಭಟಿಸಲಿಕ್ಕೆ ನಮಗೆ ಶಕ್ತಿ ಬರುತ್ತದೆ. ಆದ್ದರಿಂದ ಥರ್ಡ ಫೋರ್ಸ್ ನಾವು ಕ್ರಿಯೇಟ್ ಮಾಡಬೇಕು , ಈ ವಿಚಾರವನ್ನು ಡಾಕ್ಟರ್ ಲೋಹಿಯಾರವರು ಹೇಳಿಕೊಂಡು ಬಂದಿದ್ದಾರೆ, ನಾವು ಸೋಷಿಯಲಿಸ ನವರು, ಈ ವಿಷಯದ ಬಗ್ಗೆ ಕಳವಳ ಇದೆ.

3–30 P.M.

ಈ ರಾಷ್ಟ್ರದ ಅಂತಃಶಕ್ತಿಯನ್ನು ಕೊಂದವರು ಯಾರು ? ಈ ದೇಶದಲ್ಲಿ ಪರೋಕ್ಷವಾನ ಮತ್ತೊಮ್ಮೆ ಗುಲಾಮಗಿರಿ ಮನೋಭಾವನೆಯನ್ನು ತಂದು ತುಂಬಲಿಕ್ಕೆ ಪ್ರಯತ್ನ ಮಾಡಿದಂಥ ಜನ ಯಾರು ? ಕಳೆದ ಸುಮಾರು ೨೭ ವರ್ಷಗಳಿಂದ ಯಾವ ಒಂದು ಪ್ರಧಾನ ಮಂತ್ರಿ ಗದ್ದಿಗೆಯಲ್ಲಿ ಕುಳಿತಗಿ ಬಂದಂಥ ಪಂಡಿತ ಜವಹರಲಾಲ್ ನೆಹರೂ ಅವರಿಂದ ಹಿಡಿದು, ಶ್ರೀಮತಿ ಇಂದಿರಾ ಗಾಂಧಿ ಅವರಿಗೂ,

ಈ ರಾಷ್ಟ್ರಕ್ಕೆ ಒಂದು ಸ್ವತಂತ್ರವಾದ ವಿದೇಶಾಂಗ ನೀತಿಯನ್ನು ಕೊಡದೆ, ತಮ್ಮ ರಾಜಕೀಯವನ್ನು ಸಾಧಿಸಿಕೊಳ್ಳಲಿಕ್ಕೆ, ಈ ರಾಷ್ಟ್ರದ ಜನರಿಗೆ ವಿಶೇಷವಾದಂಥ ಒಂದು ಶಕ್ತಿಯನ್ನು ಕೊಡಲಿಕ್ಕೆ ಅವಕಾಶ ಕೊಡದೆ, ಒಂದು ಸಾರಿ ಅಮೆರಿಕಾ ದೇಶದವರ ಕಡೆ ತಲೆ ವಾಲಿ, ಅವರೇ ಸರಿ ಎನ್ನುವುದು, ಇನ್ನೊಂದು ಸಾರಿ, ರಷಿಯಾ ದೇಶದವರ ಕಡೆ ತಲೆ ವಾಲಿದಾಗ, ರಷಿಯಾ ದೇಶದವರೇ ಸರಿ ಎನ್ನುವುದು, ಮತ್ತೆ ಈಗ ಚೈನಾ ದೇಶದ ಸರದಿಯೂ ಬಂದಿದೆ, ಮುಂದೆ ಇನ್ನು ಯಾರ ಕಡೆಗೊ ಗೊತ್ತಿಲ್ಲ, ಇದಕ್ಕೆ ಕಾರಣವೇನೆಂದರೆ, ನಮ್ಮ ರಾಷ್ಟ್ರಕ್ಕೆ ನಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಂಡು, ಆ ನಮ್ಮ ಅಸ್ತಿತ್ವವನ್ನು ಜಗತ್ತಿಗೇ ಪರಿಣಾಮಕಾರಿಯಾಗಿ ತೋರಿಸಿಕೊಡತಕ್ಕ ಸ್ಪಷ್ಟವಾದ ಮತ್ತು ಖಚಿತವಾದ ಒಂದು ವಿದೇಶಾಂಗ ನೀತಿ ನಮ್ಮ ದೇಶದಲ್ಲಿ ಅಂದಿನಿಂದ ಇಂದಿನವರೆಗೂ ಬಂದಿಲ್ಲ—ಎನ್ನುವುದನ್ನು ನಾನು ಈ ಸದನದಲ್ಲಿ ಸ್ಪಷ್ಟವಾಗಿ ಮತ್ತು ಖಚಿತವಾಗಿ ಹೇಳುತ್ತಿದ್ದೇನೆ. ನಮ್ಮ ದೇಶದ ವಿದೇಶಾಂಗ ನೀತಿ ಅಂದಿನಿಂದ ಇಂದಿನವರೆಗೂ ಬಾಡಿಗೆ ತಲೆಯಲ್ಲಿಯೇ ಬಂದಿದೆ, ಬಾಡಿಗೆ ಬಾಯಲ್ಲಿಯೇ ಬಂದಿದೆ. ಇವತ್ತು ಮಾಸ್ಕೋ ನಗರದಲ್ಲಿ ಮಳೆ ಬಂದರೆ, ಮಲ್ಲೇಶ್ವರದಲ್ಲಿ ಕೊಡೆ ಹಿಡಿಯುವ ಜನ ನಮ್ಮ ದೇಶದಲ್ಲಿ ಇದ್ದಾರೆ. ಪೀಕಿಂಗ್ ನಗರದಲ್ಲಿ ಮಳೆ ಬಂದರೆ ಕೋಲಾರದಲ್ಲಿ ಕೊಡೆ ಹಿಡಿಯುವ ಜನ ನಮ್ಮ ದೇಶದಲ್ಲಿ ಇದ್ದಾರೆ. ಇವತ್ತಿನ ದಿವಸ ಅಮೆರಿಕಾ ದೇಶದವರ ಜೊತೆಯಲ್ಲಿ ಯಾರು "ಭಾಯಿ, ಭಾಯಿ" ಎಂದು ಹೋಗುತ್ತಿದ್ದಾರೆ ಎನ್ನುವುದು ಜಗತ್ತಿಗೇ ಗೊತ್ತಿದೆ. ಇವತ್ತು, ನಮ್ಮ ಮಾನ್ಯ ಸ್ನೇಹಿತರು, ಚೈನಾ ದೇಶವನ್ನು ಪ್ರಗತಿಗಾಮಿ ಎಂದು ಕರೆದಿದ್ದಾರೆ, ಕರೆಯಲಿ ಸಂತೋಷ. ಚೈನಾ ದೇಶ ಪ್ರಗತಿಗಾಮಿ ಆದರೆ, ರಷಿಯಾ ದೇಶವೇನು ?

ಶ್ರೀ ಡಿ. ದೇವರಾಜ ಅರಸ್.—ಕೆಲವರಿಗೆ ಚೈನಾ, ಕೆಲವರಿಗೆ ಅಮೆರಿಕಾ, ಮತ್ತೆ ಕೆಲವರಿಗೆ ಸ್ವರ್ಗಲೋಕ, ಏಕೆಂದರೆ, ಲೋಹಿಯಾ ಅವರು ಸ್ವರ್ಗದಲ್ಲಿ ಇದ್ದಾರೆ. ಪರೋಕ್ಷವಾಗಿ ಅವರಿಂದ ಬಂದ ವಾಯ್ಸ್ ಅನ್ನು ಮಾನ್ಯ ಸದಸ್ಯರು ಕೇಳುತ್ತಿರಬಹುದು.

ಶ್ರೀ ಎಸ್. ಬಂಗಾರಪ್ಪ.—ಉಳಿದಿದ್ದು ನರಕ ಲೋಕ, ಬಹುಶಃ ತಮಗೆ ಅಲ್ಲಿಂದ ವಾಯ್ಸ್ ಬರುತ್ತಾ ಇರಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವರ್ಗ ಎನ್ನುವ ಮಾತಿನಲ್ಲಿ ನಮಗೆ ವಿಶ್ವಾಸ ಇದೆ. ಭಾರತದ ಸಂಸ್ಕೃತಿಯಲ್ಲಿ ಪಾಪ–ಪುಣ್ಯಗಳ ವಿಚಾರದಲ್ಲಿ ಸ್ವರ್ಗಲೋಕಕ್ಕೆ ಬಹಳ ಪ್ರಾಮುಖ್ಯತೆ ಇದೆ. ಆದುದರಿಂದ, ಇಂತಹ ಒಂದು ಸಂಸ್ಕೃತಿಯ ನೆಲದ ಮಣ್ಣಿನಲ್ಲಿ ನಮ್ಮ ದೇಶದ ವಿದೇಶಾಂಗ ನೀತಿ ಮತ್ತು ಯೋಜನೆಗಳು ಬೇರು ಬಿಟ್ಟು, ಮೊಳಕೆಯೊಡೆದು, ಗಿಡವಾಗಿ, ದೊಡ್ಡ ಮರವಾಗಿ, ಉತ್ತಮ ಫಲ ಬಿಡಬೇಕೆಂದು ಸಂಪೂರ್ಣ ವಿಶ್ವಾಸವಿಟ್ಟಿರುವ ಜನ—ಈ ನಮ್ಮ ದೇಶದವರು. ಆದರೆ, ಅಧಿಕಾರದಲ್ಲಿರುವವರ ವಿದೇಶಾಂಗ ನೀತಿ ಏನು ? ಇದು ಕುಂಡದಲ್ಲಿ ಬೆಳೆಸಿರತಕ್ಕ ಗಿಡ. ಇದನ್ನು ಯಾವ ಪ್ರದರ್ಶನಕ್ಕಾದರೂ ಇಡಬಹುದು.

ಶ್ರೀ ಡಿ. ದೇವರಾಜ ಅರಸ್.—ಇಡೀ ಪ್ರಪಂಚಕ್ಕೆ ನಾನ್–ಅಲೈನ್‌ಮೆಂಟ್ ಇನಿಷಿಯೇಟ್ ಮಾಡಿದವರು, ಭಾರತ ದೇಶದವರು ನಾವು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅಮೆರಿಕಾ ಮತ್ತು ರಷಿಯಾ ದೇಶಗಳ ನೀತಿ ಬಗ್ಗೆ ಸೋಷಲಿಸ್ಟ್ ಪಾರ್ಟಿಯ ಧೋರಣೆ ಏನು ?

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಹೇಳುವುದು, ನಮ್ಮ ರಾಷ್ಟ್ರದ ವಿದೇಶಾಂಗ ನೀತಿ ಏನು ಇದೆ, ಅದು ಕುಂಡದೊಳಗಿನ ಗಿಡವಿದ್ದಂತೆ, ಅದು ಹೂ ಬಿಟ್ಟಿದ್ದಂತೆ. ಪರದೇಶಗಳಿಗೆ ಹೋದಾಗ, ಅದರ ಮೂಸಂಕನ್ನು ತೆಗೆಯುತ್ತಾರೆ ಆದರೆ, ನಮ್ಮ ಗಿಡಕ್ಕೆ ಮಳೆ ಬೀಳುತ್ತದೆ, ಮೋಡ ಇರುತ್ತದೆ. ಹೀಗೆ, ಹೋದ ಹೋದ ಕಡೆಗಳಲ್ಲಿ ಹಲಹಲವು ರೂಪದಲ್ಲಿ ಈ ಕುಂಡದೊಳಗಿನ ಗಿಡವನ್ನು ಪ್ರದರ್ಶನ ಮಾಡುತ್ತಾರೆ ಆದುದರಿಂದ ನಮ್ಮ ರಾಷ್ಟ್ರದ ವಿದೇಶಾಂಗ ನೀತಿ ಏನು ಇದೆ, ಅದು ಮೂಲಭೂತವಾಗಿ ಬದಲಾವಣೆ ಆಗುವವರೆಗೆ ನಾವು ಯಾರೂ ಕೂಡ, ಅಂದರೆ, ಅಲ್ಲಿ ಕೂತಿರುವ ಮಾನ್ಯ ಸದಸ್ಯರುಗಳೂ ಕೂಡ ಮೆಚ್ಚುವುದಿಲ್ಲ. ಎಲ್ಲೋ ಕುಳಿತು, ಸೂತ್ರ ಹಿಡಿದುಕೊಂಡು, ಸೂತ್ರದಾರಿಗಳಾಗಿ ಇರುವವರು ಮಾತ್ರ ಈ ಒಂದು ವಿದೇಶಾಂಗ ನೀತಿಯನ್ನು ಮೆಚ್ಚಬೇಕೇ ಹೊರತು, ಸ್ವತಂತ್ರವಾಗಿ ವಿಚಾರ ಮಾಡತಕ್ಕ ನಮ್ಮ ಭಾರತ ದೇಶದ ಬಗ್ಗೆ ಪ್ರಾಮಾಣಿಕವಾಗಿ ಕಳಕಳಿ ಇರತಕ್ಕ ಜನ ಈಗಿರುವ ಒಂದು ವಿದೇಶಾಂಗ ನೀತಿಯನ್ನು ಮೆಚ್ಚಲಿಕ್ಕೆ ಸಾಧ್ಯವಿಲ್ಲ. ಆದರೆ, ಇವತ್ತಿನ ದಿವಸ ಸಿಕ್ಕಿಂ ಬಗ್ಗೆ ಏನೊಂದು ಸಂವಿಧಾನ ತಿದ್ದುಪಡಿಯನ್ನು ತಂದಿದಾರೆ, ಅದನ್ನು ನಾನು ಸ್ವಾಗತಿಸುತ್ತೇನೆ. ಅಲ್ಲಿರುವ ಅರಸು ಚೋಗ್ಯಾಲ್ ಅವರ ಅರಸೊತ್ತಿಗೆ ಮುಗಿದಿದೆ ಆದರೆ, ಇವತ್ತಿಗೆ ಅವರ ನಿಜವಾದ ಅರಸೊತ್ತಿಗೆಯ ಗದ್ದುಗೆ ಇಲ್ಲವಾದರೂ ಕೂಡ "ಅರಸು ರಾಕ್ಷಸ ಮಂತ್ರಿಯೆಂಬುವ ಮೊರೆವ ಹುಲಿ ಪರಿವಾರ ಹದ್ದಿನ ನೆರವಿ ಬಡವರ ಬಿನ್ನಹವನಿನ್ನಾರು ಕೇಳ ವರು" ಎನ್ನುವ ರೀತಿ ಆಗಬಾರದು.

ಒಬ್ಬ ಮಾನ್ಯ ಸದಸ್ಯರು.—ಈ ಮಾತನ್ನು ಯಾರು ಹೇಳಿದ್ದು ?

ಶ್ರೀ ಕೋಣಂದೂರು ಲಿಂಗಪ್ಪ.—ಸುಮಾರು ಹದಿನಾರನೇ ಶತಮಾನದಲ್ಲಿದ್ದ ಖ್ಯಾತ ಕನ್ನಡ ಕವಿ ಕುಮಾರವ್ಯಾಸ ಈ ಮಾತನ್ನು ಹೇಳಿದ್ದಾನೆ. ನಿಜವಾದ ಅರಸು ಇಲ್ಲದೇ ಹೋದರೂ, ಮತ್ತೊಬ್ಬ ಅರಸು ಬಂದು, ಅವನು ರಾಕ್ಷಸನಾಗಿ, ಮೊರೆವ ಹುಲಿ ಪರಿವಾರ ಹದ್ದಿನ ನೆರವಿ ಬಡವರ ಬಿನ್ನಹವಿನ್ನಾರು ಕೇಳುವರು—ಎನ್ನುವಂಥ ಪರಿಸ್ಥಿತಿ ಬಾರದೇ ಇರಲಿ ಎಂದು ನಾನು ಹಾರೈಸಿ, ಈ ಒಂದು ತಿದ್ದುಪಡಿಯನ್ನು ನಾನು ಸ್ವಾಗತಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ ಎನ್. ಪಾಟೀಲ್ (ಹುಮನಾಬಾದ್).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಸಿಕ್ಕಿಂ ದೇಶದ ಪ್ರಜೆಗಳು ಇನ್ನು ಮುಂದೆ ನಾವೂ ಕೂಡ ಅಖಂಡ ಭಾರತದ ಜೊತೆಯಲ್ಲಿ ಬೆಳೆಯಬೇಕೆಂದು, ಮತ್ತು ಪ್ರಪಂಚದ ದೊಡ್ಡ ರಾಷ್ಟ್ರಗಳಲ್ಲೊಂದಾದ ಭಾರತ ರಾಷ್ಟ್ರದ ನಾಗರೀಕರ ಜೊತೆಯಲ್ಲಿ ಬದುಕಬೇಕೆಂಬ ಉದ್ದೇಶದಿಂದ, ಸಿಕ್ಕಿಂ ದೇಶದ ಜನತೆ ಒಂದು ನಿರ್ಣಯವನ್ನು ಪಾಸು ಮಾಡಿದೆ. ಪ್ರಜಾಪ್ರಭುತ್ವ ಮತ್ತು ಪ್ರಜಾತಂತ್ರವನ್ನು ಒಪ್ಪಿಕೊಂಡಿರುವ ದೇಶ ಮತ್ತು ಅದರಲ್ಲಿ ನಂಬಿಗೆಯನ್ನು ಇಟ್ಟಿರತಕ್ಕ ದೇಶವಾಗಿದೆ. ಸಿಕ್ಕಿಂ ದೇಶದ ಜನಗಳು ಪ್ರಜಾಪ್ರಭುತ್ವದ ಬಗ್ಗೆ ಅಪಾರವಾದ ಆಸಕ್ತಿಯನ್ನು ತೋರಿಸಿದಾರೆ. ಆ ಸಿಕ್ಕಿಂ ದೇಶದ ಪ್ರಜೆಗಳು, ನಮಗೆ ಅರಸೊತ್ತಿಗೆಯ ಆಡಳಿತ ಬೇಡ ; ನಮಗೆ ಬೇಕಾಗಿರುವುದು ಜನರಿಂದ ಆರಿಸಿ ಬಂದಂಥ ಪ್ರತಿನಿಧಿಗಳು ಎಂದು ಹೇಳಿ, ಅರಸೊತ್ತಿಗೆಯಲ್ಲಿ ಅಧಿಕಾರ ನಡೆಸುತ್ತಿದ್ದ, ಚಿತೂರಿ ಚೋಗ್ಯಾಲ್ ಅವರನ್ನು, ಆ ಸಿಕ್ಕಿಂ ದೇಶದ ಜನರು ಕಿತ್ತು ಹೊಗೆದರು. ಅನಂತರ, ಆ ಒಂದು ದೇಶದ ಜನರು, ಅಖಂಡ ಭಾರತದ ಅವಿಭಾಜ್ಯ ಅಂಗವಾಗುತ್ತೇವೆ, ನಮ್ಮನ್ನು ಭಾರತ ದೇಶದವರು, ತಮ್ಮ ದೇಶಕ್ಕೆ ಸೇರಿಸಿಕೊಳ್ಳದಿದ್ದರೆ, ನಮಗೆ ಅನ್ಯಾಯವಾಗುತ್ತದೆ ಎಂದು ಕೇಳಿಕೊಂಡ ಮೇಲೆ, ಸುಮಾರು ೨೨—೨೮ ವರ್ಷಗಳ ಹಿಂದೆಯೇ ಇದರ ಬಗ್ಗೆ ತೆಗೆದುಕೊಳ್ಳಬೇಕಾಗಿದ್ದ ಕ್ರಮವನ್ನು ಇವತ್ತಿನ ದಿವಸ ತೆಗೆದುಕೊಂಡಿದ್ದಾರೆ. ಈ ಒಂದು ಸದನದಲ್ಲಿ ಮಾನ್ಯ ಸದಸ್ಯರನೇಕರು ಚರ್ಚೆ ಮಾಡಿದ್ದನ್ನು ಕೂಲಂಕಷವಾಗಿ ವಿಚಾರಮಾಡಿ ನೋಡುವುದಾದರೆ, ಅದರಲ್ಲಿ ಎರಡು ವ್ಯತ್ಯಾಸಗಳು ಎದು ಕಾಣುತವೆ. ಒಂದನೆಯ ವ್ಯತ್ಯಾಸ ಏನು ಎಂದು ಹೇಳುವುದಾದರೆ, ಕೆಲವು ಮಾನ್ಯ ಸದಸ್ಯರು ಚೀನಾ ದೇಶದ ಬಗ್ಗೆ ಬಹಳ ಭಕ್ತಿಯನ್ನು ತೋರಿಸಿದರೆ, ಇನ್ನು ಕೆಲವು ಮಾನ್ಯ ಸದಸ್ಯರು ಅದರ ಬಗ್ಗೆ ವಿಪರೀತ ಕೆಟ್ಟ ಶಬ್ದಗಳನ್ನು ಬಳಸಿ ಮಾತನಾಡಿದ್ದಾರೆ. ಆದರೆ, ನಾನು ಈ ಸದನದಲ್ಲಿ ಹೇಳುವುದೇನೆಂದರೆ, ನಮ್ಮ ಭಾರತ ದೇಶದವರು ಯಾವತ್ತಿಗೂ ವಿಸ್ತರಣಾವಾದಿಗಳಲ್ಲ. ಈಗ ಸಿಕ್ಕಿಂ ನಲ್ಲಿ ನಡೆಯುತ್ತಾ ಇರುವುದನ್ನು ನೋಡಿದರೆ, ಹಿಂದೆ ಹೈದರಾಬಾದ್‌ನಲ್ಲೂ ಕೂಡ ಹಾಗೆಯೇ ನಡೆದಿತ್ತು. ಹಿಂದೆ ಹೈದರಾಬಾದ್ ಒಂದು ಸಣ್ಣ ರಾಜ್ಯವಾಗಿತ್ತು. ಇದನ್ನು ಪಾಕಿಸ್ತಾನಕ್ಕೆ ಸೇರಬೇಕೆಂದು ರೆಪ್ರಜಂಟೇಷನ್ ಕಳುಹಿಸಿದ್ದರು. ಆ ಬಗ್ಗೆ ಮಾತುಕತೆ ಕೂಡ ನಡೆದಿತ್ತು. ಅದೇ ರೀತಿ, ಬಂಗ್ಲಾ ದೇಶದ ಸಲುವಾಗಿ ನಮ್ಮ ಭಾರತದವರು ರಕ್ತದ ಬಲಿದಾನವನ್ನೇ ಕೊಟ್ಟರು. ಆ ಒಂದು ಪರಿಣಾಮವಾಗಿ ಇವತ್ತು ಬಂಗ್ಲಾ ದೇಶದ ವಿಮೋಚನೆಯಾಯಿತು. ಆದರೆ, ಕೆಲವು ಮಾನ್ಯ ಸದಸ್ಯರು ಭಾರತದ ವಿದೇಶಾಂಗ ನೀತಿ ಬಗ್ಗೆ ಮಾತನಾಡುತ್ತಾ, ರಷಿಯಾ ದೇಶದಲ್ಲಿ ಮಳೆ ಬಿದ್ದರೆ, ಮಲ್ಲೇಶ್ವರದಲ್ಲಿ ಕೊಡೆ ಹಿಡಿಯುವ ಜನರು ಇದ್ದಾರೆ—ಎಂದು ಮುಂತಾಗಿ ಹೇಳಿದರು. ಬಹುಶಃ ಅವರ ಕಣ್ಣಿಗೆ ಹಾಗೆ ಮಾತ್ರ ಕಾಣಿಸಿರಬೇಕು.

ಆದರೆ ಇವತ್ತು ಭಾರತದಲ್ಲಿ ನಾನ್ ಅಲೈನ್‌ಮೆಂಟ್ ಪಾಲಿಸಿ ಇದೆ. ಯಾರು ನಮ್ಮ ಪಕ್ಕದ ರಾಜ್ಯದಲ್ಲಿ ಇದ್ದಾರೆ ಅವರು ನಮ್ಮ ಅಣ್ಣ ತಮ್ಮಂದಿರು ಎನ್ನತಕ್ಕಂಥ ಭಾವನೆಯಿಂದ ಇದನ್ನು ಒಪ್ಪಿಕೊಂಡಿದ್ದೇವೆ. ಇವತ್ತು ನ್ಯಾಶನಲ್ ಇಂಟ್ರೆಸ್ಟ್ ಆಫ್ ದಿ ಮನೋಪಲಿಸ್ಟ್‌ನಿಂದ ಅಲ್ಲ, ನ್ಯಾಶನಲ್ ಇಂಟ್ರೆಸ್ಟ್ ಆಫ್ ದಿ ವರ್ಕಿಂಗ್ ಕ್ಲಾಸ್ ಮಸ್ಟ್ ಬಿ ಅಪ್ ಹೆಲ್ ಎನ್ನತಕ್ಕಂಥ ದೃಷ್ಟಿಯಿಂದ ನಾವು ಒಪ್ಪಿಕೊಂಡಿರತಕ್ಕಂಥದ್ದು. ಇವತ್ತು ಭಾರತ ವರ್ಷ ಯಾವುದೇ ದುರುದ್ದೇಶದಿಂದ ಇದರಲ್ಲಿ ಹಸ್ತಕ್ಷೇಪವನ್ನು ಮಾಡುತ್ತಾ ಇಲ್ಲ. ಭಾರತ ವರ್ಷ ಮಾಡಿದಂಥ ಪ್ರತಿಯೊಂದು ಕೆಲಸವನ್ನೂ ಇಡೀ ದೇಶಗಳೆಲ್ಲವೂ ತಲೆಬಾಗಿ ಒಪ್ಪಿಕೊಳ್ಳುತ್ತಿವೆ, ಪಾಕಿಸ್ತಾನ ವಿಮೋಚನೆಯ ಕಾಲದಲ್ಲಿ, ಪಾಕಿಸ್ತಾನದಲ್ಲಿ ಅಲ್ಲಿಯ ಜನಗಳು ದಂಗೆ ಎದ್ದಾಗ ನಾವು ಅದರಲ್ಲಿ ಹಸ್ತಕ್ಷೇಪ ಮಾಡಲಿಲ್ಲ ಅಲ್ಲಿಯ ಜನಗಳು ನಮ್ಮ ದೇಶದಲ್ಲಿ ಶರಣಾಗತರಾಗಿ ಬಂದಾಗ ಅವರು ನಮ್ಮ ಬಂಧುಗಳು ಎನ್ನತಕ್ಕಂಥ ಭಾವನೆಯಿಂದ ಬಂಗ್ಲಾದೇಶ ವಿಮೋಚನೆಗಾಗಿ ಪಾಕಿಸ್ತಾನದ ಡಿಕ್ಟೇಟರ್ ಶಿಪ್‌ನಿಂದ ವಿಮೋಚನೆಗೊಳಿಸಲು ನಮ್ಮ ದೇಶವು ಆ ದೇಶಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ಇಂಥ ಒಳ್ಳೆಯ ಕೆಲಸ ಮಾಡಿರುವ ಬಗ್ಗೆ ಇಡೀ ಪ್ರಪಂಚವೇ ತಲೆ ಬಾಗಿ ಒಪ್ಪಿಕೊಂಡಿದೆ. ಆದರೆ ನಮ್ಮ ಕಡೆ ಮಂಗ್ಯಾ ಎಂದರೆ ಕೋಡಂಗಿ ಎಂದು ಹೇಳುತ್ತೇವೆ ಅದು ತನ್ನ ಮರಿಯನ್ನು ಹೊಟ್ಟೆಗೆ ಕಟ್ಟಿಕೊಂಡೇ ಮರದ ಮೇಲಕ್ಕೆ ಏರುತ್ತದೆ, ಅದೇ ರೀತಿ ನೀರಿನಲ್ಲಿಯೂ ಸಹ ಮುಳುಗುವವರೆಗೂ ಆ ಮಗುವನ್ನು ಎತ್ತಿಕೊಂಡೇ ಇರುತ್ತದೆ ಆದರೆ ತಾನೇ ಮುಳುಗಿ ಹೋಗು

ವಾಗ ಆ ಮರಿಯನ್ನು ಕೆಳಕ್ಕೆ ಹಾಕಿ ತಾನು ಅದರ ಮೇಲೆ ನಿಂತುಕೊಳ್ಳುತ್ತದೆ ಆ ರೀತಿ ಸಿಕ್ಕಿಂ ರಾಜ್ಯವನ್ನು ವಹಿಸಿಕೊಂಡ ಮೇಲೆ ನಮ್ಮ ದೇಶ ಮಾಡಬಾರದು. ಅವರ ಡೆವಲಪ್‌ಮೆಂಟ್ ಕಾರ್ಯಗಳ ಬಗ್ಗೆಯೂ ಸರ್ಕಾರ ಯೋಚನೆ ಮಾಡಬೇಕು. ಇವತ್ತು ಸೋದರ ಭಾವನೆಯಿಂದ, ಅಣ್ಣತಮ್ಮಂದಿರು ಎನ್ನತಕ್ಕಂಥ ಭಾವನೆಯಿಂದ ಸಿಕ್ಕಿಂ ರಾಜ್ಯವನ್ನು ನಮ್ಮ ದೇಶಕ್ಕೆ ಸೇರಿಸಿಕೊಳ್ಳಬೇಕಾಗಿದೆ. ಇವತ್ತು ನಮ್ಮ ಭಾರತ ವರ್ಷದ ವಿದೇಶಾಂಗ ನೀತಿಯ ಬಗ್ಗೆ ಅನೇಕ ಸದಸ್ಯರುಗಳು ಮಾತನಾಡಿದರು. ಆದರೆ ಇವತ್ತು ನಮ್ಮ ದೇಶ ಪಂಚಶೀಲ ತತ್ವಗಳಂತೆ ನಮ್ಮ ದೇಶದ ಆಡಳಿತ ನಡೆಯುತ್ತಿದೆ. ಇವತ್ತು ನಾವು ಸಿಕ್ಕಿಂ ರಾಜ್ಯವನ್ನು ಅಣ್ಣತಮ್ಮಂದಿರು ನಮ್ಮ ಪಕ್ಕದಲ್ಲಿರತಕ್ಕಂಥ ಬಂಧುಗಳು ಅವರಿಗೆ ಕಷ್ಟ ಬಂದಿದೆ ಎನ್ನತಕ್ಕಂಥ ಭಾವನೆಯಿಂದ ತೆಗೆದುಕೊಂಡಿದ್ದೇವೆಯೇ ಹೊರತು ಅವರ ಮೇಲೆ ಆಕ್ರಮಣಮಾಡಿ ಆ ಸಿಕ್ಕಿಂ ರಾಜ್ಯವನ್ನು ನಮ್ಮ ರಾಜ್ಯಕ್ಕೆ, ನಮ್ಮ ಭಾರತ ವರ್ಷದಲ್ಲಿ ಸೇರಿಸಿಕೊಳ್ಳುತ್ತಿಲ್ಲ. ಸಿಕ್ಕಿಂ ಭಾರತ ದೇಶದ ಒಂದು ಅಂಗವಾಗಿದೆ. ಮೊದಲು ಸಿಕ್ಕಿಂ ರಾಜ್ಯವು ಸಹ ಭಾರತ ದೇಶದ ಅವಿಭಾಜ್ಯ ಅಂಗವಾಗಿತ್ತು. ನಾವು ಯಾವುದೇ ಭಯ ಭೀತಿಯಿಂದ ಇದನ್ನು ಒಪ್ಪಿಕೊಳ್ಳಬೇಕಾಗಿಲ್ಲ. ಸಿಕ್ಕಿಂ ರಾಜ್ಯದವರೇ ಒಪ್ಪಿಕೊಂಡು ನಮ್ಮ ದೇಶಕ್ಕೆ ಸೇರಲು ಇಚ್ಛೆಪಟ್ಟಿರುವುದರಿಂದ ನಾವು ಸಹ ಒಪ್ಪಿಕೊಂಡು, ನಮ್ಮ ಅಣ್ಣ ತಮ್ಮಂದಿರುಗಳನ್ನು, ನಮ್ಮ ಭಾರತ ವರ್ಷಕ್ಕೆ ಸೇರಿಸಿಕೊಳ್ಳಬೇಕಾಗಿದೆ. ಇವತ್ತು ಸಿಕ್ಕಿಂ ರಾಜ್ಯವನ್ನು ನಾವು ವಹಿಸಿಕೊಂಡಮೇಲೆ ನಮ್ಮ ಮೇಲೆಯೂ ಸಹ ರೆಸ್ಪಾನ್ಸಿಬಿಲಿಟಿ ಇರುತ್ತದೆ. ಬಂಗ್ಲಾದೇಶದಲ್ಲಿ ಪಾಕಿಸ್ತಾನದ ಮಿಲ್ಟ್ರಿ ಡಿಕ್ಟೇಟರ್‌ಶಿಪ್‌ನ ವಿರುದ್ಧ ಅಲ್ಲಿಯ ಜನಗಳು ದಂಗೆ ಎದ್ದಾಗ, ಅಲ್ಲಿಯ ಜನಗಳು ನಮ್ಮಲ್ಲಿ ಮೊರೆ ಇಟ್ಟು ಕೇಳಿಕೊಂಡಾಗ್ಯೆ ನಮ್ಮ ದೇಶ ಅವರಿಗೆ ಸಹಾಯ ನೀಡಿತು ಆಗ ನಮ್ಮ ಮಿತ್ರ ರಾಷ್ಟ್ರವಾಗಿದ್ದ ರಷ್ಯಾ ದೇಶವು ಒಳ್ಳೆಯ ಸಮಯದಲ್ಲಿ ನಮಗೆ ಸಹಾಯ ಮಾಡಿತು. ಒಳ್ಳೆಯ ಸಪೋರ್ಟ್‌ನ್ನು ಕೊಟ್ಟರು ನಾನು ಈ ಸಮಯದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಏನೆಂದರೆ ಇವತ್ತು ತಲೆ ಇದ್ದವರು ಯಾರೂ ಇದಕ್ಕೆ ವಿರೋಧ ಮಾಡುವುದಿಲ್ಲ. ತಲೆ ಇಲ್ಲದವರಿಗೆ ಇದು ಅರ್ಥವಾಗುವುದು ಕಷ್ಟ. ಇವತ್ತಿನ ದಿವಸ ಹಾರ್ಟ್ ವೀಕ್ ಆಗಿದರೆ ನಮ್ಮ ಸೈನ್‌ಟಿಸ್ಟ್‌ಗಳು ಬೇರೆ ಹಾರ್ಟ್‌ನ್ನು ಬದಲಾಯಿಸಬಲ್ಲರು, ಲಂಗ್ಸ್ ಕೆಟ್ಟಿದ್ದರೆ ಬೇರೆ ಲಂಗ್ಸ್‌ನ್ನು ಹಾಕಬಲ್ಲರು ಆದರೆ ತಲೆ ಶುದ್ಧವಾಗಿಲ್ಲದಿದ್ದರೆ, ತಲೆಯನ್ನು ರಿಪೇರಿ ಮಾಡುವುದಕ್ಕೆ ಬರುವುದಿಲ್ಲ. ಅಂಥವರು ಇದನ್ನು ಸ್ವಾಗತಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬಹುದಷ್ಟೆ ನಾನು ವೈಯಕ್ತಿಕವಾಗಿ ಯಾರನ್ನೂ ಅಪಮಾನ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಾ ಇಲ್ಲ, ಈ ಶಬ್ದವನ್ನು ಪ್ರಯೋಗ ಮಾಡುತ್ತಾ ಇಲ್ಲ. ಇವತ್ತು ಕಾಮಿಣಿ ಕಣ್ಣಿನವರಿಗೆ, ಜಾಂಡೀಸ್‌ನವರಿಗೆ ಎಲ್ಲಾ ಹಳದೀ ಕಾಣುವ ಹಾಗೆ ಅವರಿಗೆ ಎಲ್ಲಾ ಸಂಶಯಾಸ್ಪದವಾಗಿ ಕಾಣುತ್ತಿರಬಹುದು. ಆದುದರಿಂದ ಯಾವ ಒಂದು ಸದುದ್ದೇಶದಿಂದ ಈ ಸಿಕ್ಕಿಂ ರಾಜ್ಯವನ್ನು ನಮ್ಮ ಭಾರತ ವರ್ಷಕ್ಕೆ ಸೇರಿಸಿಕೊಳ್ಳುತ್ತಿದೇವೆ ಎನ್ನುವ ಬಗ್ಗೆ ಮಾನ್ಯ ಎಸ್. ಎಂ. ಕೃಷ್ಣರವರೂ ಸಹ ತಮ್ಮ ಭಾಷಣದಲ್ಲಿ ಹೇಳಬಹುದು. ನಮ್ಮ ಸರ್ಕಾರದವರು ಇದನ್ನು ತಂದಿರತಕ್ಕಂಥದ್ದು ಬಹಳ ಸೂಕ್ತವಾಗಿದೆ ನಮ್ಮ ದೇಶದವರು ಹಾಗೂ ಸಿಕ್ಕಿಂ ರಾಜ್ಯದಲ್ಲಿರತಕ್ಕಂಥ ಜನಗಳು ಶಾಂತಿಯುತವಾಗಿ ಸಹಬಾಳ್ವೆಯಿಂದ ಜೀವನ ನಡೆಸುವಂಥಾದ್ದಕ್ಕೆ ಬೆಲೆ ಕೊಟ್ಟು, ಒಂದು ಸರಿಯಾದ ಮಾರ್ಗದಲ್ಲಿಯೇ ನಮ್ಮ ಸರ್ಕಾರದವರು ಆಲೋಚನೆ ಮಾಡಿಯೇ ಇದನ್ನು ತಂದಿದ್ದಾರೆ. ಸಮತಾವಾದ ಸಮಾಜದ ತತ್ವದ ಮೇಲೆ, ಸಮಾನತೆಯ ಆಧಾರದ ಮೇಲೆ ಇದನ್ನು ತರಬೇಕೆಂದು ತಂದಿದ್ದಾರೆ. ಒಟ್ಟಿನಲ್ಲಿ ಸಮಾಜವಾದದ ತತ್ವಕ್ಕೆ ಇದು ಸರಿಯಾಗಿದೆ, ಅದಕ್ಕೆ ಅನುಗುಣವಾಗಿಯೇ ಇರುವುದರಿಂದ ಅದನ್ನು ಸ್ವಾಗತಿಸಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೆ, ಸರಳವಾಗಿರತಕ್ಕಂಥ ಈ ನಿರ್ಣಯಕ್ಕೆ ಈ ಸಭೆಯ ಸರ್ವಾನುಮತದ ಬೆಂಬಲ ಮತ್ತು ಒಪ್ಪಿಗೆ ದೊರೆತಿರುವುದಕ್ಕಾಗಿ ನಾನು ನನ್ನ ಕೃತಜ್ಞತೆಗಳನ್ನು ಮಾನ್ಯ ವಿರೋಧಪಕ್ಷದ ನಾಯಕರುಗಳಿಗೆ ಅರ್ಪಿಸಲಿಕ್ಕೆ ಇಚ್ಛೆಪಡುತ್ತೇನೆ. ಶ್ರೀಮಾನ್ ಶಾಮಣ್ಣನವರು ಚರ್ಚೆಯನ್ನು ಪ್ರಾರಂಭ ಮಾಡತಕ್ಕ ಕಾಲದಲ್ಲಿ ಕೆಲವು ವಿಚಾರಗಳ ಬಗ್ಗೆ ತಮ್ಮ ಶಂಕೆ ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಅವರು ಹೇಳಿದಂತ ಆಶ್ಚರ್ಯ ತರತಕ್ಕಂಥ ಹಲವಾರು ವಿಚಾರಗಳ ಪೈಕಿ ಅತ್ಯಂತ ಆಶ್ಚರ್ಯದಾಯಕವಾದ ಒಂದು ಧೋರಣೆ ಏನೆಂದರೆ ಸಿಕ್ಕಿಂ ಜನರನ್ನು ಏನೋ ಕೇಳಿದಿರಿ ಆದರೆ ನೇಪಾಳ, ಭೂತಾನ ಜನರನ್ನು ಏಕೆ ಕೇಳಲಿಲ್ಲ ಎಂದು. ಅಷ್ಟಕ್ಕೆ ನಿಲ್ಲಿಸಿದರು, ಮುಂದಕ್ಕೆ ಹೋಗಿ ಪಾಕಿಸ್ತಾನ, ಚೈನಾ ಕೇಳಬೇಕಾಗಿತ್ತು ಎಂದು ಹೇಳುತ್ತಾರೆ ಎಂಬ ಗಾಬರಿ ನನಗೆ ಇತ್ತು. ಇಲ್ಲಿ ಅಡಕವಾಗಿರತಕ್ಕಂಥ ಪ್ರಶ್ನೆ ಸಿಕ್ಕಿಂ ಮತ್ತು ಭಾರತಕ್ಕೆ ಯಾವರೀತಿ ಸಂಬಂಧ ಇರಬೇಕು ಎನ್ನತಕ್ಕಂಥಾದ್ದಕ್ಕೆ ಸೀಮಿತವಾದ ಪ್ರಶ್ನೆ. ಆದ್ದರಿಂದ ಇದರ ಬಗ್ಗೆ ಯುನೈಟೆಡ್ ನೇಷನ್ಸ್‌ಗೆ ಹೋಗುವುದಕ್ಕೆ ಆಗುತ್ತದೆಯೇ ? ಸಿಕ್ಕಿಂನವರು ಹೇಗೆ ಇರಬೇಕು ಅವರ ಸಂಬಂಧ ಹೇಗೆ ಇರಬೇಕು ಎನ್ನುವುದಕ್ಕೆ ಇನ್ನೊಬ್ಬರನ್ನು ಹೋಗಿ ಕೇಳಬೇಕಾಗಿತ್ತು ಎಂದು ಹೇಳುವುದು ಅತಿರೇಕವಾದ ವಾದ ಎಂದು ಹೇಳಿ ಶಾಮಣ್ಣನವರು ನಿಂತು ಕೂತು

ಆಲೋಚನೆ ಮಾಡಿದರೆ ಅವರಿಗೂ ಕೂಡ ಅರಿವಾಗುತ್ತದೆ. ಅವರು ಮತ್ತೊಂದು ಮಾತನ್ನು ಹೇಳಿದರು, ತತ್ವವೇನೋ ಬಹಳ ಒಳ್ಳೆಯದು, ಸಿಕ್ಕಿಂ ಸೇರತಕ್ಕದ್ದು ಅಡ್ಡಿ ಇಲ್ಲ, ಆದರೆ ಹೋಗಿರತಕ್ಕಂಥ ರೀತಿ ಸರಿಯೋ ಅಲ್ಲವೊ, ಅದರಲ್ಲಿ ಸರ್ವಾಧಿಕಾರತ್ವ ಕಂಡು ಬರುತ್ತದೆ ಎಂದು ಹೇಳಿದರು. ಈ ಸಿಕ್ಕಿಂ ಜನತೆ ಇಚ್ಛೆಯೇ ಸಾರ್ವಭೌಮಾಧಿಕಾರ, ಅದು ಅಲ್ಲಿಂದ ಪ್ರತಿಬಿಂಬಿತವಾಗಿದೆ. ಅದನ್ನು ನಾವು ನಿರ್ಣಯದ ರೂಪದಲ್ಲಿ ತಿಳಿಸಿದ್ದೇವೆ. ಆದ್ದರಿಂದ ಇದರ ಬಗ್ಗೆ ಶ್ರೀಮಾನ್ ಶಾಮಣ ನವರಿಗೆ ಹೆಚ್ಚು ಅನುಮಾನಗಳು ಬೇಡ ಎಂದು ತಿಳಿಸಲಿಚ್ಛಿಸುತ್ತೇನೆ. ಮತ್ತೊಂದು ವಿಚಾರ ಹೇಳಿದರು Who are our friends, ನಮಗೆ ಸ್ನೇಹಪರ ರಾಷ್ಟ್ರಗಳು ಯಾರು ಎಂದು. ಬಾಂಗ್ಲಾ ದೇಶದ ಯುದ್ಧ ನಡೆಯುತಕ್ಕ ಕಾಲದಲ್ಲಿ ಇಡೀ ವಿಶ್ವಕ್ಕೆ ಗೊತ್ತು ನಮ್ಮ ಸ್ನೇಹಪರ ರಾಷ್ಟ್ರಗಳು ಯಾವುದು ಎಂದು. ಶಾಮಣ್ಣನವರಿಗೆ ಅನುಮಾನ ಇರಬಹುದು. ಆದರ ಬಗ್ಗೆ ನಮಗೆ ಅನುಮಾನ ಉಳಿದಿಲ್ಲ. ಭಾರತ ದೇಶಕ್ಕೆ ಸ್ನೇಹಪರ ರಾಷ್ಟ್ರಗಳು ಇವೆ. ಆಫ್ರಿಕಾದಲ್ಲಿ, ಏಷ್ಯಾದಲ್ಲಿ, ಯುರೋಪ್‌ನಲ್ಲಿ ಇವೆ. ಹೊಸದಾಗಿ ಹುಡುಕಬೇಕಾಗುವ ಗುರುತಿಸ ಬೇಕಾಗುವ ಪ್ರಮೇಯ ಇಲ್ಲ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವು ಸಾಮ್ರಾಜ್ಯವಾದಿ ಅವಶೇಷ ಗಳು ಎಂದು ಹೇಳಿ ಗೆಳೆಯ ಎಂ.ಎಸ್. ಕೃಷ್ಣನ್ ಅವರು ಬಹಳ ಸೂಕ್ಷ್ಮವಾಗಿ ಹೇಳಿದ್ದಾರೆ. ಈ ಅವಶೇಷ ಗಳನ್ನು ನಿರ್ಮೂಲ ಮಾಡುವುದಕ್ಕಾಗಿಯೇ ಈ ಒಂದು ಗೊತ್ತುವಳಿ. ಕಾಗೋಡು ತಿಮ್ಮಪ್ಪನವರು ನಮ್ಮ ವಿದೇಶಾಂಗ ನೀತಿಯ ಮುತ್ಸದ್ದಿತನದ ಬಗ್ಗೆ ಒಳ್ಳೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಶ್ರೀಮಾನ್ ಬಂಗಾರಪ್ಪನವರು ಕಳೆದ ಸಾರಿ ಸಿಕ್ಕಿಂ ಸ್ಟೇಟ್‌ಹುಡ್ ಬಿಲ್ಲನ್ನು ಮಂಡಿಸತಕ್ಕ ಕಾಲದಲ್ಲಿ ಕೆಲವಾರು ಕ್ಲಾರಿಫಿಕೇಷನ್ ಕೇಳಬೇಕು ಎಂದು ಅಗ್ರಹಪೂರ್ವಕವಾಗಿ ಕೇಳಿದರು. ಆದರೆ ಅವತ್ತು ಕೇಳಿ ದಂತಹ ಕ್ಲಾರಿಫಿಕೇಷನ್‌ಗೆ ಇವತ್ತಿನ ದಿನ ಗೊತ್ತುವಳಿಯಲ್ಲಿ ಉತ್ತರ ದೊರೆತಿದೆ ಎಂದು ನನಗೆ ಉಂಟಾ ಗಿರತಕ್ಕ ಸಮಾಧಾನ. ಒಟ್ಟಿನಲ್ಲಿ ಅಧ್ಯಕ್ಷರೆ ನಾನು ಹೇಳತಕ್ಕದ್ದು ಏನೂ ಇಲ್ಲ. ಸಿಕ್ಕಿಂನ ಜನತೆಯನ್ನು ಭಾರತದ ಜನತೆಯ ಜೊತೆಯಲ್ಲಿ ಸ್ನೇಹ ಮತ್ತು ವಿಶ್ವಾಸದಿಂದ ಸೇರುವುದಕ್ಕೆ ಈ ಸಭೆಯೂ ಸಹ ಮಿಕ್ಕ ಶಾಸನಸಭೆಗಳ ಜೊತೆಯಲ್ಲಿ, ಸಂಸತ್ತಿನ ಜೊತೆಯಲ್ಲಿ ಅವರಿಗೆ ಆಹ್ವಾನ ನೀಡುತೇವೆ. ನನ್ನು ಅವರ ಸಂಬಂಧ ನಿರಂತರವಾಗಿ, ಅವ್ಯಾಹತವಾಗಿ ಮುಂದುವರೆಯಲಿ ಎಂದು ಆಶಿಸಿ ಈ ಗೊತ್ತುವಳಿಯನ್ನು ಅಂಗೀಕಾರ ಮಾಡಬೇಕು ಎಂದು ಈ ಸದನವನ್ನು ಕೇಳಿಕೊಳ್ಳುತ್ತೇನೆ.

MEDAM SPEAKER.—I will put the Motion to the vote of the House. The question is :

> "THAT this House ratifies the amendments to the Constitution of India falling within the purview of the proviso to clause (2) of Article 368 thereof, proposed to be made by the Constitution (Thirty-eighth Amendment) Bill 1975, as passed by the two Houses of Parliament, which seeks to make Sikkim a State in the Union and the Short title of which has been changed into "the Constitution (Thirty-sixth Amendment) Act, 1975".

The motion was adopted and the Official Resolution unanimously passed.

Requests for taking up some notices

SRI T. R. SHAMANNA.—I have given a notice. The Finance Corporations are in a very bad position now and many people are put to hardship.

ಅಧ್ಯಕ್ಷರು.—ಈಗ ನಾವು ಅಜೆಂಡಾದಲ್ಲಿ ಯಾವುದೂ ಹಾಕಿಲ್ಲ. ಇವತ್ತು ಸ್ಪೇಷಲ್ ಮೀಟಿಂಗ್ ಕರೆದಿದ್ದೇವೆ. ಮಾನ್ಯ ಸದಸ್ಯರು ನೋಟೀಸ್ ಕೊಟ್ಟಿದ್ದಾರೆ. ಆದರೆ ಈಗ ಫೈನಾನ್ಸ್ ಮಿನಿಸ್ಟರ್ ಇಲ್ಲ.